ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2023 ಮಾಸ ಪತ್ರಿಕೆ

ಸಂಪುಟ/Volume : 45
ಸಂಚಿಕೆ/Issue : 5
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | February 2023 | Monthly




## ಜೀವನದಲ್ಲಿ ಶಾರ್ಟ್‌ಕಟ್ ಬೇಡ

## ಮಕ್ಕಳ ಮೇಲೆ ಒತ್ತಡ ಹೇರಬೇಡಿ

## ಸ್ಮಾರ್ಟ್ ವರ್ಕ್ ಇರಲಿ





A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಫೆಬ್ರವರಿ, ಮಾರ್ಚ್ ಬಂದಿತೆಂದರೆ ಪ್ರಕೃತಿಯಲ್ಲೆಲ್ಲಾ ಹೊಸತನ ಕಾಣುತ್ತದೆ. ಹಳೆ ಎಲೆಗಳೆಲ್ಲಾ ಉದುರಿ ಹೊಸ ಎಲೆಗಳು ಚಿಗುರುವ ಕಾಲ... ಪ್ರಕೃತಿ ಹಳೆಯದನ್ನು ತೊರೆದು ಹೊಸತನವನ್ನು ಕಾಣುತ್ತಿದ್ದರೆ, ವಿದ್ಯಾರ್ಥಿಗಳಲ್ಲಿ ಹಳೆಯದನ್ನು ಜೊತೆಗೂಡಿಸಿಕೊಂಡು ಹೊಸದಾದ ಪರೀಕ್ಷೆಗೆ ಸನ್ನದ್ಧರಾಗಿ ತಮ್ಮನ್ನು ತಾವು ಮುಂದಿನ ಹೊಸಜೀವನಕ್ಕೆ ಅಣಿಗೊಳಸಿಕೊಳ್ಳುವ ಕಾಲ. ಜನವರಿ 27, 2023 ರಂದು ಪ್ರಧಾನಿ ಮೋದಿಯವರು ದೆಹಲಿಯಲ್ಲಿ ತಮ್ಮ 'ಪರೀಕ್ಷಾ ಪೆ ಚರ್ಚಾದ 6ನೇ ಆವೃತ್ತಿಯಲ್ಲಿ' ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಾ ವಿದ್ಯಾರ್ಥಿಗಳು ಶಾಲಾ ಶೈಕ್ಷಣಿಕ ವರ್ಷದ ವಾರ್ಷಿಕ ಪರೀಕ್ಷೆಗೆ ಹೇಗೆ ಸಜ್ಜಾಗಬೇಕು, ಹೇಗೆ ಪರೀಕ್ಷೆಯನ್ನು ಎದುರಿಸಬೇಕು, ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಸಲು ಏನು ಮಾಡಬೇಕೆಂದು ಹೇಳಿದರು.

ಅವರ ಸಂವಾದದ ಪ್ರಮುಖ ಅಂಶಗಳು ಹೀಗಿವೆ: ತಮ್ಮ ಮಗ ಅಥವಾ ಮಗಳು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಬೇಕು, ಉತ್ತಮ ಅಂಕಗಳನ್ನು ಗಳಸಬೇಕೆಂದು ನೆಂಟರ ಮುಂದೆ, ಸಮಾಜದ ಮುಂದೆ ತೋರಿಸಿ ಕೊಳ್ಳಬೇಕೆಂಬ ಒತ್ತಡವಿದ್ದರೆ ಅದು ಸಮಸ್ಯೆ. ಮಕ್ಕಳ ಮೇಲೆ ಒತ್ತಡ ಹಾಕಬೇಡಿ. ಚುನಾವಣೆ ಗೆಲ್ಲಲು ಸಾಕಷ್ಟು ಒತ್ತಡವಿರುತ್ತದೆ. ಇಲ್ಲಿ ನಮ್ಮ ಸಾಮರ್ಥ್ಯ ಪರಿಗಣನೆಗೆ ಬರುತ್ತದೆ. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕೂಡ ತಮ್ಮ ಸಾಮರ್ಥ್ಯವನ್ನು ಕಡೆಗಣಿಸಬಾರದು. ಟೀಕೆ ಮತ್ತು ಅಡಚಣೆಯ ನಡುವೆ ಸಣ್ಣ ವ್ಯತ್ಯಾಸವಿರುವುದು. ಪೋಷಕರು ರಚನಾತ್ಮಕ ಮತ್ತು ಸಕಾರಾತ್ಮಕ ರೀತಿಯಲ್ಲಿ ಮಕ್ಕಳನ್ನು ಟೀಕಿಸಬೇಕು. ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ನಿರೀಕ್ಷೆಗಳಗೆ ಹೊಂದಾಣಿಕೆಯಾಗಬೇಕು. ನೀವು ಮಾಡುತ್ತಿರುವ ಕೆಲಸ, ನಿಮ್ಮ ಗುರಿಯ ಮೇಲೆ ಗಮನ ಕೇಂದ್ರೀಕೃತವಾಗಿರಬೇಕು.

ಸಮಯದ ನಿರ್ವಹಣೆಯ ಬಗ್ಗೆ ಹೇಳುತ್ತಾ ನಿಮ್ಮ ಮನೆಯಲ್ಲಿ ಅಮ್ಮ ತಾನು ಸಾಕಷ್ಟು ಕೆಲಸ ಮಾಡುತ್ತಿದ್ದರೂ ಸುಸ್ತಾಯಿತು, ಅಬ್ಬಾ ಸಾಕಾಯ್ತು ಎಂದು ಹೇಳುವುದಿಲ್ಲ. ನಿಮ್ಮ ತಾಯಿಯನ್ನು ನೋಡಿ ಸಮಯದ ನಿರ್ವಹಣೆ ಹೇಗೆ ಮಾಡಬೇಕೆಂಬುದನ್ನು ಕಲಿತುಕೊಳ್ಳ ಎಂದು ಮೋದಿ ಮಕ್ಕಳಗೆ ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಯಶಸ್ಸನ್ನು ಗಳಸಲು ಯಾವುದೇ ಶಾರ್ಟಕಟ್‌ಗಳನ್ನು ಬಳಸಬಾರದು. ತಮ್ಮ ಸಮಯ ಮತ್ತು ಸೃಜನಶೀಲತೆಯನ್ನು ಉತ್ತಮ ರೀತಿಯಲ್ಲಿ ಬಳಸಿದರೆ ಯಶಸ್ಸಿನ ಎತ್ತರವನ್ನು ಏರಬಹುದು. ನಿಮ್ಮ ಪ್ರಯತ್ನಗಳು ಎಂದಿಗೂ ವ್ಯರ್ಥವಾಗುವುದಿಲ್ಲವೆಂದು ಪ್ರಧಾನಮಂತ್ರಿಗಳಾದ ಮೋದಿಯವರು ವಿದ್ಯಾರ್ಥಿಗಳಗೆ ಕಿವಿಮಾತು ಹೇಳಿದರು.

ರಾಷ್ಟ್ರ ನಾಯಕನ ಮಾತುಗಳು ಪ್ರತಿ ವಿದ್ಯಾರ್ಥಿಗಳಗೂ ಪ್ರೇರಣಾದಾಯಕ. ಪರೀಕ್ಷೆಯೆಂಬುದು ನಾವು ಕಲಿತಿರುವ ಜ್ಞಾನದ ಕನ್ನಡಿಯೆಂಬುದನ್ನು ವಿದ್ಯಾರ್ಥಿಗಳು ಮರೆಯಬಾರದು. 2022-23 ಶೈಕ್ಷಣಿಕ ವರ್ಷದ ಪರೀಕ್ಷೆಗಳನ್ನು ಎದುರಿಸುತ್ತಿರುವ ಎಲ್ಲಾ ವಿದ್ಯಾರ್ಥಿಗಳಗೂ ಯಶಸ್ಸು ನಿಮ್ಮದಾಗಲಿ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಹಾರೈಸುತ್ತದೆ.

- - - - -

**ಕ್ಷಮೆಯಾಚನೆ:** ಕಳೆದ ಸಂಚಿಕೆಯಲ್ಲಿ ನಮ್ಮ ಕಾರ್ಯಕರ್ತರಿಬ್ಬರಿಗೆ ಶ್ರದ್ಧಾಂಜಲಿ ಸಲ್ಲಿಸುವಾಗ ಕಾರ್ಯಕರ್ತರ ಭಾವಚಿತ್ರಗಳು ಅದಲುಬದಲಾಗಿದೆ. ಕಣ್ತಪ್ಪಿನಿಂದ ಈ ತೊಂದರೆಯಾಗಿದೆ ಎಂದು ತಿಳಸುತ್ತಾ ಪ್ರೀತಿಯ ಓದುಗರು ಮನ್ನಿಸಬೇಕಾಗಿ ಕೋರಿಕೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಒಂದು ಪ್ಲಾನ್ ಹಾಕೋಣ ಬನ್ನಿ 3
- ನಮಾಮಿ ಭಾರತ್ 4
- ಜಯದೇವಿತಾಯಿ ಲಿಗಾಡೆ 5
- ರಾಷ್ಟ್ರೀಯ ವಿಜ್ಞಾನ ದಿನ 6
- ವರದಿಗಳು 7
- ರಾಷ್ಟ್ರೀಯ ಕಾರ್ಯಕಾರಿಣಿ ವರದಿ 9
- ಚಿತ್ರ ಸುದ್ದಿ 11
- ಮುಖ್ಯಮಂತ್ರಿಗಳೊಂದಿಗೆ ಕ.ರಾ.ಮಾ.ಶಿ.ಸಂಘದ ಪ್ರಮುಖರು 12

# ಒಂದು ಪ್ಲಾನ್ ಹಾಕೋಣ ಬನ್ನಿ



**ಸತ್ಯ ಘಟನೆ:** ಒಂದು ಊರಿನ ಬಸ್ ಸ್ಟ್ಯಾಂಡ್. ಅಲ್ಲಿ ಕುಡಿಯುವ ನೀರಿನ ಟ್ಯಾಂಕ್ ಸ್ವಲ್ಪ ದೂರದಲ್ಲಿದೆ. ಒಂದು ಮುಸ್ಸಂಜೆಯ ಹೊತ್ತು. ಮಹಿಳೆಯೊಬ್ಬಳು ನೀರು ಕುಡಿಯಲು ಹೋದಳು. ಅವಳು ಮೈ ತುಂಬಾ ಒಡವೆ ಧರಿಸಿರುವುದನ್ನು ಅಲ್ಲಿದ್ದ ಒಬ್ಬ ಕಳ್ಳ ಗಮನಿಸಿದ. ಅವಳು ನೀರು ಕುಡಿದು ಹಿಂತಿರುಗುವುದರಲ್ಲಿ ಅವಳಿಗೆ ಕಾಣುವ ಹಾಗೆ ನೆಲದ ಮೇಲೆ 50 ಮತ್ತು 100 ರೂ ಗಳ ಎಂಟು- ಹತ್ತು ನೋಟುಗಳನ್ನು ಹಾಕಿದ. ನೀರು ಕುಡಿದ ಅವಳು ಅವನ್ನು ಹೆಕ್ಕಿಕೊಳ್ಳಲು ಬಗ್ಗಿದಾಗ ತಾನೂ ಹೋದ. ತನಗೂ ಅದು ಆಕಸ್ಮಾತ್ ಕಾಣಿಸಿದಂತೆ ನಾಟಕವಾಡಿದ. ಆ ಮಹಿಳೆಗೆ ಮೆಲ್ಲನೆ ಹೇಳಿದ 'ಇಬ್ಬರೂ ಹಂಚಿಕೊಳ್ಳೋಣ. ಆದರೆ ಅಲ್ಲಿ ಜನ ಇದ್ದಾರೆ, ಗಲಾಟೆ ಆಗತ್ತೆ, ಆದ್ದರಿಂದ ಬಸ್‌ಸ್ಟ್ಯಾಂಡ್ ಹಿಂಭಾಗಕ್ಕೆ ಹೋಗೋಣ'. ಹಣದ ಆಸೆಗೆ ಮನಸೋತ ಆ ಮಹಿಳೆ ಸಮಯ-ಸಂದರ್ಭ ಯೋಚಿಸದೇ ಅವನ ಜೊತೆ ನಡೆದಳು. ಬಸ್‌ಸ್ಟ್ಯಾಂಡಿನ ಹಿಂಭಾಗಕ್ಕೆ ಹೋದೊಡನೆ ಆ ಕಳ್ಳ ಮಹಿಳೆಯ ಕೊರಳಿನಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಓಡಿದ!

ಕಳ್ಳತನದಂತಹ ಕನಿಷ್ಠ ಕೆಲಸ ಮಾಡುವವರೇ ಅದೆಷ್ಟು ಪ್ಲಾನ್ ಮಾಡಿ ಮಾಡುತ್ತಾರೆ! ಆದರೆ ವಿದ್ಯಾರ್ಜನೆಯಂತಹ ಶ್ರೇಷ್ಠ ಕೆಲಸ ಮಾಡುವ ನಾವು ಪರೀಕ್ಷೆ ಎದುರಿಸಲು ಸರಿಯಾದ ಒಂದು ಪ್ಲಾನ್ ಮಾಡಬೇಡವೆ?

ಮೊದಲೇ ಪ್ಲಾನ್ ಮಾಡಿ ಅನಂತರ ಮಾಡಿದ ಕೆಲಸ ಅತ್ಯಂತ ತೃಪ್ತಿಕರವಾಗಿ ಆಗುತ್ತದೆ ಎಂಬುದು ಎಲ್ಲರಿಗೂ ಅರ್ಥವಾಗಬೇಕಾದ ಒಂದು ಸಾಮಾನ್ಯ ತಿಳುವಳಿಕೆ.

ಈಗ ನಾವು ಮಾಡಬೇಕಾದ ಕೆಲಸವೆಂದರೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸಾಧ್ಯವಾದಷ್ಟೂ ಉತ್ತಮ ಮಾರ್ಕ್ಸ್ ಗಳಿಸುವುದು, ಅಲ್ಲವೆ ಮಕ್ಕಳೇ? ನಮಗೆ ಆರು ವಿಷಯಗಳಿವೆ. ಪ್ರತಿಯೊಂದು ವಿಷಯಕ್ಕೂ ಪಠ್ಯಪುಸ್ತಕ ಮತ್ತು ಅದರಲ್ಲಿ ಪಾಠಗಳಿವೆ. ವರ್ಷದುದ್ದಕ್ಕೂ ಶಿಕ್ಷಕರು ಆ ಪಾಠಗಳನ್ನು ಕಲಿಸಿದ್ದಾರೆ. ನಾವೂ ತಕ್ಕಮಟ್ಟಿಗೆ ಓದಿದ್ದೇವೆ. ಈಗ ನಾವು ಮಾಡಬೇಕಾದ ಪ್ಲಾನ್‌ನಲ್ಲಿ ಈ ಕೆಳಗಿನ ಅಂಶಗಳಿರಬೇಕು.

- ನಮಗೆ ಸುಲಭವಾದ ವಿಷಯಗಳಾವುವು? (ಕಷ್ಟವಾದ ವಿಷಯಕ್ಕೆ ಸ್ವಲ್ಪ ಹೆಚ್ಚು ಸಮಯ ನೀಡಬೇಕಾಗುತ್ತದೆ).
- ನನ್ನ ಗುರಿ ಏನು? ಶೇ 90 ಕ್ಕಿಂತ ಹೆಚ್ಚು ಅಂಕ ಗಳಿಸುವುದು ಗುರಿಯಾದರೆ ಅದಕ್ಕೆ ಎಷ್ಟು ಪ್ರಯತ್ನ ಹಾಕಬೇಕು? ಹೇಗೆ ಹಾಕುವುದು?
- ಹೇಗೆ ಸಮಯ ಹೊಂದಾಣಿಕೆ ಮಾಡಿಕೊಳ್ಳುವುದು? ಎಲ್ಲೆಲ್ಲಿ ನನ್ನ ಸಮಯ ವ್ಯರ್ಥವಾಗುತ್ತಿದೆ? ಆರೋಗ್ಯ ಹಾಳು ಮಾಡಿಕೊಳ್ಳದೆ ನಿದ್ದೆಯನ್ನೇನಾದರೂ ಕಡಿಮೆ ಮಾಡಿಕೊಳ್ಳಬಹುದೆ?
- ದಿನದ ಎಷ್ಟು ಸಮಯ ಅಭ್ಯಾಸಕ್ಕಾಗಿ ತೆಗೆದಿಡಬೇಕು? ಏಳುವುದು ಮತ್ತು ಮಲಗುವುದು ಎಷ್ಟು ಹೊತ್ತಿಗೆ?
- ಕಷ್ಟವಾದ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಯಾರ ನೆರವನ್ನು ಪಡೆಯಲಿ?
- ಎಲ್ಲಾ ವಿಷಯಗಳನ್ನು ಎಷ್ಟು ಬಾರಿ ಪುನರಾವರ್ತನೆ ಮಾಡಲು ಸಾಧ್ಯ?
- ಮಾದರಿ ಪ್ರಶ್ನೆ ಪತ್ರಿಕೆಗಳು ನನ್ನ ಬಳಿ ಇವೆಯೆ? ಅಣಕು ಪರೀಕ್ಷೆಯನ್ನು ನನಗೆ ನಾನೇ ಮಾಡಿಕೊಂಡರೆ ಹೇಗೆ?
- ಪರೀಕ್ಷೆ ಮೊದಲ ಕೆಲವು ದಿನಗಳು ದಿನದ 24 ಗಂಟೆಯೂ ಸಿದ್ಧತೆ ಮಾಡಿಕೊಳ್ಳಲು ರಜೆ ಇರತ್ತದೆ. ಅದನ್ನು ಅಭ್ಯಾಸಕ್ಕೆ ಹೇಗೆ ಸದುಪಯೋಗಪಡಿಸಿಕೊಳ್ಳಬಹುದು? Combined Study ಮಾಡಿದರೆ ಹೇಗೆ?

ಇವೆಲ್ಲ ಪ್ಲಾನ್‌ಗಳಿಗೆ ಉತ್ತರವನ್ನು ಬರೆದಿಟ್ಟುಕೊಳ್ಳುವುದು ಸೂಕ್ತ. 'ಪ್ಲಾನ್ ಮಾಡೋದು ಸುಲಭ. ಆದರೆ ಅದನ್ನು ಅನುಸರಿಸೋದು ಕಷ್ಟ' ಇದು ಕೆಲವರ ಮಾತು ಬನ್ನಿ, ಅದನ್ನು ಸುಳ್ಳು ಮಾಡೋಣ! 'ನಾನು ಪ್ಲಾನೂ ಮಾಡುವೆ, ಅದನ್ನು ಅನುಸರಿಸಿಯೇ ತೋರಿಸುವೆ' – ಈ ಮಂತ್ರ ನಮ್ಮದಾಗಲಿ. ●

**ಕನಸಿನ ಗೋಪುರ ಒಡೆಯದಿರಲಿ, ಮನಸ್ಸಿನ ಮಂದಿರ ಬೀಳದಿರಲಿ. ಆದರೆ ನಿಮ್ಮ ಬದುಕು ಯಾವಾಗಲೂ ಕನ್ನಡಿಗರ, ಕನ್ನಡದ ಸೇವೆಯಲ್ಲಿರಲಿ.** – ಚನ್ನಬಸಪ್ಪ ದಳವಾಯಿ, ದಾವಣಗೆರೆ

# ನಮಾಮಿ ಭಾರತ್

ಡಾ. ವೈ. ಎಸ್. ಗಾಯತ್ರಿ
ಸಂಸ್ಕೃತ ಪ್ರಾಧ್ಯಾಪಿಕೆ, ರಾಮಯ್ಯ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪದವೀ ಕಾಲೇಜು, ಬೆಂಗಳೂರು

**ಗಂಗಾ ಸರಸ್ವತೀ ಸಿಂಧುರ್ಬ್ರಹ್ಮಪುತ್ರಶ್ಚಚ ಗಂಡಕಿ।**
**ಕಾವೇರೀ ಯಮುನಾ ರೇವಾ ಕೃಷ್ಣಾ ಗೋದಾ ಮಹಾನದೀ॥**

ಹಿಂದಿನ ಸಂಚಿಕೆಯಲ್ಲಿ ಭಾರತದ ಪುಣ್ಯ ನದಿಗಳಾದ ಗಂಗಾ, ನರ್ಮದಾ ಮತ್ತು ಕಾವೇರಿಯ ಬಗೆಗೆ ಅರಿತೆವು. ಈ ಸಂಚಿಕೆಯಲ್ಲಿ ಏಕಾತ್ಮತಾ ಸ್ತೋತ್ರದಲ್ಲಿ ಹೇಳಲಾಗಿರುವ ಉಳಿದ ಪುಣ್ಯನದಿಗಳ ಬಗೆಗೆ ತಿಳಿಯೋಣ.

**ಕೃಷ್ಣಾ:** ಮಹಾಬಲೇಶ್ವರದ ಬಳಿ ಇರುವ ಪಶ್ಚಿಮ ಘಟ್ಟದಲ್ಲಿ ಉಗಮವಾಗುವ ಕೃಷ್ಣಾ ನದಿಯು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಲ್ಲಿ ಹರಿಯುತ್ತ ಕೊನೆಗೆ ಬಂಗಾಲ ಕೊಲ್ಲಿಯನ್ನು ಸೇರುತ್ತಾಳೆ. ಈ ನದಿಯು ನೀರಾವರಿಗೆ ಅತ್ಯುತ್ತಮ ಸಂಸಾಧನವಾಗಿದೆ. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ 'ಕೃಷ್ಣ ಪುಷ್ಕರಮ್' ಸಮಯದಲ್ಲಿ ಈ ನದಿಯಲ್ಲಿ ಸ್ನಾನ ಮಾಡಿದರೆ ಮನುಷ್ಯನು ಪಾಪಗಳಿಂದ ಮುಕ್ತನಾಗುವನೆಂಬ ಪ್ರತೀತಿ ಇದೆ. ವಿಜಯವಾಡದ ಕನಕದುರ್ಗ ದೇವಸ್ಥಾನ, ಶ್ರೀ ಶೈಲದ ಮಲ್ಲಿಕಾರ್ಜುನ ಜ್ಯೋತಿರ್ಲಿಂಗ ಮುಂತಾದ ಪ್ರಖ್ಯಾತ ದೇವಾಲಯಗಳು ಕೃಷ್ಣಾ ನದಿಯ ತೀರದಲ್ಲಿವೆ.

**ಗೋದಾವರಿ:** ಮಹಾರಾಷ್ಟ್ರದ ತ್ರ್ಯಂಬಕೇಶ್ವರದಲ್ಲಿ ಪ್ರಾರಂಭವಾಗುವ ಗೋದಾವರಿಯು ದಕ್ಷಿಣ ಗಂಗೆ ಎಂದೂ ಪ್ರಸಿದ್ಧಳಾಗಿದ್ದಾಳೆ. ಗಂಗಾ ನದಿಯ ನಂತರ ಎರಡನೇ ಅತಿ ಉದ್ದವಾದ ನದಿ ಗೋದಾವರಿಯು ಪೂರ್ವಕ್ಕೆ 1465 ಕಿಲೋ ಮೀಟರ್ ಹರಿಯುತ್ತಾ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ಛತ್ರೀಸ್‌ಗಡ್ ಮತ್ತು ಒರಿಸ್ಸಾ ರಾಜ್ಯಗಳ ಹಸಿರು ಮಾನಸಿರಿಗೆ ಕಾರಣಳಾಗಿದ್ದಾಳೆ. ಶಿವಪುರಾಣದ ಕೋಟಿರುದ್ರ ಸಂಹಿತೆಯಲ್ಲಿ ಗೋದಾವರಿ ನದಿಯ ಕಥೆಯನ್ನು ವರ್ಣಿಸಲಾಗಿದೆ.

**ಗಂಡಿಕಿ:** ಈ ನದಿಯ ಮುಖ್ಯವಾಗಿ ಇಂದಿನ ನೇಪಾಳದಲ್ಲಿ ಹರಿಯುತ್ತದೆ. ಇದನ್ನು ನಾರಾಯಣಿ ಎಂದೂ ಕರೆಯಲಾಗುತ್ತದೆ. ತನ್ನ ದಡದಲ್ಲಿ ದೊರೆಯುವ ಸಾಲಿಗ್ರಾಮಗಳಿಗೆ ಹೆಸರುವಾಸಿಯಾಗಿರುವ ಈ ನದಿಯ ದಡದಲ್ಲೇ ವಾಲ್ಮೀಕಿ ಆಶ್ರಮವೂ ಇದೆ. ಈ ಸ್ಥಾನದಲ್ಲೇ ವಾಲ್ಮೀಕಿಯು ರಾಮಾಯಣವನ್ನು ರಚಿಸಿರುವನೆಂಬ ಪ್ರತೀತಿಯೂ ಇದೆ.

ಬ್ರಹ್ಮಪುತ್ರ ನದಿಯು ಕೈಲಾಸ ಪರ್ವತದ ಸಮೀಪವಿರುವ ಮಾನಸ ಸರೋವರದಲ್ಲಿ ಜನ್ಮತಾಳುತ್ತದೆ. ಪೌರಾಣಿಕ ಆಕರಗಳಿಂದ ತಿಳಿದು ಬರುವ ಅಂಶವೆಂದರೆ, ಶಂತನು ಋಷಿಯ ಪತ್ನಿಯಾದ ಅಮೋಘಳು ಸೃಷ್ಟಿಕರ್ತನಾದ ಬ್ರಹ್ಮನಿಂದ ಒಬ್ಬ ಮಗನನ್ನು ಪಡೆದಳೆಂದೂ, ಮಗುವ ಜಲಾಕಾರವನ್ನು ಪಡೆಯಿತೆಂದೂ, ಆದಕಾರಣ ಇದಕ್ಕೆ ಬ್ರಹ್ಮಪುತ್ರವೆಂಬ ಹೆಸರೆಂದೂ, ತಿಳಿದು ಬರುತ್ತದೆ. ಪರಶುರಾಮನ ಕೊಡಲಿಯು ಈ ನದಿಯಲ್ಲಿ ಕಳಚಿ, ಅದಕ್ಕಂಟಿದ ಅವನ ತಾಯಿಯ ರಕ್ತವೆಲ್ಲ ತೊಳೆದು ಹೋಯಿತೆಂದೂ, ಆ ಕಾರಣದಿಂದ ಈ ನದಿಗೆ ಕೆಂಪು ಬಣ್ಣವಿರುವುದೆಂಬುದು ಪೌರಾಣಿಕ ಐತಿಹ್ಯ. ಆದರೆ ಆ ಪ್ರದೇಶದಲ್ಲಿರುವ ಮಣ್ಣಿನಗುಣದಿಂದ ಇದು ಕೆಂಬಣ್ಣವನ್ನು ಹೊಂದಿದ್ದು, ಈ ಪ್ರದೇಶದಲ್ಲಿ ಕಬ್ಬಿಣದ ಅಂಶವು ಹೇರಳವಾಗಿ ದೊರೆಯುತ್ತದೆಂಬುದು ಭೌಗೋಳಿಕ ಮಾಹಿತಿ.

ಭಾರತ ನದಿಗಳ ವಿಷಯವನ್ನು ಎರಡು ಸಂಚಿಕೆಗಳಿಂದ ತಿಳಿಯುತ್ತ ಬಂದಿದ್ದೇವೆ. ಇಂದು ಕೆಲವು ನದಿಗಳ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ಪಡೆಯೋಣ.

**ಸರಸ್ವತಿ ನದಿ:** ನಮ್ಮ ಭರತಭೂಮಿಯಲ್ಲಿ ನದಿಗಳ ಜನಜೀವನದ ಒಂದು ಪ್ರಮುಖ ಭಾಗವೆಂಬುದು ನಿಚ್ಚಳ ಸತ್ಯ. ಸಪ್ತನದಿಗಳ ಹೆಸರೇ ನಮ್ಮ ಸಮಸ್ತ ಪಾಪಗಳನ್ನು ತೊಡೆದುಹಾಕುವುದೆಂಬ ದೃಢವಾದ ನಂಬಿಕೆ.

**ಗಂಗೇಚ ಯಮುನೇ ಚೈವ ಗೋದಾವರಿ ಸರಸ್ವತಿ।**
**ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು॥**

ಎಂಬ ಪ್ರಾರ್ಥನೆಯು ಪ್ರತಿದಿನವೂ ಮನೆಮನೆಯಲ್ಲೂ ಕೇಳಿರಬಹುದು. ಒಂದು ಪ್ರಾರ್ಥನೆ, ಸರಸ್ವತಿಯ ವಿಶೇಷಗಳೇನು? ತ್ರಿವೇಣಿ ಸಂಗಮ ಪವಿತ್ರ ಸ್ನಾನ ಜಗತ್ಪ್ರಸಿದ್ಧ. ಇಲ್ಲಿ ಸಂಗಮವಾಗುವ ನದಿಗಳು ಗಂಗೆ, ಯಮುನೆ ಮತ್ತು ಸರಸ್ವತಿ. ತ್ರಿವೇಣಿ ಸಂಗಮದಲ್ಲಿ ಗಂಗೆ ಯಮುನೆಯರ ಜಲವನ್ನು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಸರಸ್ವತಿಯದು ಹಾಗಲ್ಲ. ಅದಕ್ಕೆ ಅವಳನ್ನು ಗುಪ್ತಗಾಮಿನಿ ಎನ್ನುತ್ತಾರೆ.

ಇದು ವೈದಿಕ ಕಾಲದ ನದಿ. ಋಗ್ವೇದದಲ್ಲಿ ಈ ನದಿಯ ಬಗ್ಗೆ ಹತ್ತೂ ಮಂಡಲಗಳಲ್ಲಿ 60ಕ್ಕೂ ಮಿಕ್ಕ ಉಲ್ಲೇಖಗಳನ್ನು ನಾವು ಕಾಣಬಹುದೆಂದರೆ ಇದರ ಪ್ರಾಮುಖ್ಯತೆಯನ್ನು ನಾವೇ ಊಹಿಸಬಹುದು. ಕ್ರಿ.ಪೂ 2ನೆಯ ಸಹಸ್ರಮಾನದ ಅವಧಿಯಲ್ಲಿ ಜನರು ಈ ನದಿಯ ತೀರಗಳಲ್ಲಿ ನೆಲೆಸಿದಾಗ ಋಗ್ವೇದ ಮತ್ತು ಇನ್ನಿತರ ವೈದಿಕ ಗ್ರಂಥಗಳು ನಿರ್ಮಿತವಾದುವೆಂಬುದು ಐತಿಹ್ಯ. ನದೀ ಸೂಕ್ತವು (ಋ10.75–5) ಸರಸ್ವತಿ ನದಿಯನ್ನು ಉಲ್ಲೇಖಿಸುತ್ತದೆ. ಈ ನದಿಯು ಬಹಳ ಶಕ್ತಿಶಾಲಿಯಾದುದೆಂದು ತಿಳಿದು, ಇದರ ದಡಗಳಲ್ಲಿ ಅನೇಕ ಯಜ್ಞ– ಯಾಗಾದಿಗಳು ಜರುಗಿದ್ದವು. ಈ ಸೂಕ್ತವು ಪೂರ್ವದ ಯಮುನಾ ಮತ್ತು ಪಶ್ಚಿಮದ ಸಟ್ಲೆಜ್ ನಡುವೆ ಇರುವ ನದಿಯೆಂದು ಇದನ್ನು ಉಲ್ಲೇಖಿಸುತ್ತದೆ.

**ನಾವು ಸರಸ್ವತಿ ನದಿಯನ್ನು ಕಾಣಬಹುದೆ?**

ಈ ನದಿಗೆ 10000 ವರ್ಷಗಳ ಇತಿಹಾಸವಿದೆಯೆಂದು ನಂಬಲಾಗಿದೆ. ಘಗ್ಗರ್ – ಹಕ್ರಾ ಸಂಶೋಧನೆಯ ಫಲವು ಇದನ್ನು 86,000 ವರ್ಷಗಳಷ್ಟು ಪ್ರಾಚೀನವೆನ್ನುತ್ತದೆ. ಈ ಚಿತ್ರದಲ್ಲಿ ಜನರು ನದೀಪಾತ್ರವನ್ನು ನೋಡುತ್ತ ಆನಂದಿಸುತ್ತಿರುವುದನ್ನು ನೋಡಬಹುದು. ಈ ನದಿಯು ಹಿಮಾಲಯದ ಉತ್ತುಂಗ ಶಿಖರಗಳಲ್ಲಿ ಜನಿಸಿ, ಆದಿ ಬದರಿಕ್ಷೇತ್ರದಲ್ಲಿ ಹರಿದು, ಕಚ್ ಮೂಲಕ ಅರಬ್ಬಿ ಸಮುದ್ರವನ್ನು ಸೇರುತ್ತದೆ.

ಋಗ್ವೇದ (10.64/9) ಪ್ರಮುಖವಾದ ಮೂರು ನದಿಗಳಲ್ಲಿ ಎಂದರೆ

ಪುಟ 9 ಕ್ಕೆ ➤

**ಬಹುರತ್ನಾ ವಸುಂಧರಾ**

# ಜಯದೇವಿತಾಯಿ ಲಿಗಾಡೆ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು



ನಾಡುನುಡಿಯ ಸೇವೆಗಾಗಿ ತಮ್ಮ ಬದುಕನ್ನು ಮೀಸಲಿಟ್ಟು ದುಡಿದುದಲ್ಲದೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿಯೂ ಸಹ ಸಾಧನೆಯ ಹಂತವನ್ನು ಏರಿದ ಆದರ್ಶ ಮಹಿಳೆ ಎನಿಸಿಕೊಂಡವರು ಜಯದೇವಿತಾಯಿ ಲಿಗಾಡೆ. ಅವರು ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಪರಿಶ್ರಮ ಹೊಂದಿ ಸಾಹಿತ್ಯಸೇವೆಯಲ್ಲಿ ತೊಡಗಿ ಆ ಕ್ಷೇತ್ರಗಳಿಗೆ ತಮ್ಮ ಮೌಲಿಕ ಕೊಡುಗೆ ನೀಡಿದವರು. ಜೊತೆಗೆ ಸ್ವಾತಂತ್ರ್ಯಹೋರಾಟ ಮತ್ತು ಕರ್ನಾಟಕ ಏಕೀಕರಣದ ಹೋರಾಟಗಳಲ್ಲಿ ಸಹಸಕ್ರಿಯವಾಗಿ ತಮ್ಮನ್ನು ತೊಡಗಿಸಿ ಕೊಂಡವರು.

ಕರ್ನಾಟಕ–ಮಹಾರಾಷ್ಟ್ರ ರಾಜ್ಯಗಳ ಗಡಿಪ್ರದೇಶದ ಸಮಸ್ಯೆ ದಶಕದಶಕಗಳಿಂದಲೂ ಬಗೆಹರಿಯದೆ ಇದ್ದರೂ ಎರಡೂ ರಾಜ್ಯಗಳ ಸಾಹಿತ್ಯಿಕ, ಸಾಂಸ್ಕೃತಿಕ ಸಾಮರಸ್ಯಕ್ಕಾಗಿ ಶ್ರಮಿಸಿದ ಹಲವಾರು ಮಹನೀಯರೂ ಇದ್ದಾರೆಂಬುದನ್ನು ಮರೆಯಲಾಗದು. ಅವರಲ್ಲಿ ಸಾಹಿತಿಗಳ ಕೊಡುಗೆ ಗಣನೀಯವಾದುದು. ಆ ಸಾಲಿನ ಅಗ್ರಪಂಕ್ತಿಯಲ್ಲಿ ನಿಲ್ಲುವವರಲ್ಲಿ ಜಯದೇವಿತಾಯಿ ಲಿಗಾಡೆಯವರೂ ಪ್ರಮುಖರು. ಅವರು ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಅಧ್ಯಕ್ಷರೆನಿಸಿದ ಗೌರವವನ್ನೂ ಹೊಂದಿದವರೆಂಬುದು ಮತ್ತೊಂದು ವಿಶೇಷ.

ಜಯದೇವಿತಾಯಿ ಲಿಗಾಡೆಯವರು ಸೊಲ್ಲಾಪುರದ ಪ್ರಸಿದ್ಧ ಮನೆತನವೆನಿಸಿದ್ದ ವಾರದ ಮಲ್ಲಪ್ಪನವರ ಮೊಮ್ಮಗಳಾಗಿ 1912 ಜೂನ್ 23 ರಂದು ಜನಿಸಿದರು. ಅವರ ಅಜ್ಜನ ಮನೆ 'ಇಂದ್ರಭವನ' ಸಕಲ ವೈಭವದಿಂದ ಕೂಡಿದ್ದುದಲ್ಲದೆ, ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳ ತವರಾಗಿತ್ತು. ಮಹಿಳೆಯರಿಗಾಗಿ ವಿಜ್ಞಾನಗೋಷ್ಠಿಗಳೂ ನಡೆಯುತ್ತಿದ್ದು ಜಯದೇವಿಲಿಗಾಡೆಯವರ ತಾಯಿ ಸಂಗವ್ವತಾಯಿ ಅದರ ಕಾರ್ಯದರ್ಶಿಗಳಾಗಿದ್ದರು. ಮಲ್ಲಪ್ಪನವರು ತಮ್ಮ ದಾನ,ಧರ್ಮದ ಸ್ವಭಾವದಿಂದ ಸುತ್ತಮುತ್ತಲ ಪ್ರದೇಶಗಳಲ್ಲಿ ಬಹಳ ಒಳ್ಳೆಯ ಹೆಸರನ್ನು ಪಡೆದಿದ್ದರು. ಮನೆಯಲ್ಲಿ ನಡೆಯುತ್ತಿದ್ದ ಆಧ್ಯಾತ್ಮಿಕ ಕಾರ್ಯಕ್ರಮಗಳು ಸಾಹಿತ್ಯಿಕ ಗೋಷ್ಠಿಗಳು ಮನೆಯ ಮಕ್ಕಳು ಸುಸಂಸ್ಕೃತ ವಾತಾವರಣದಲ್ಲಿ ಬೆಳೆಯಲು ಅನುವು ಮಾಡಿದ್ದುವು..

1926 ರಲ್ಲಿ ಸೊಲ್ಲಾಪುರದ ಚೆನ್ನಮಲ್ಲಪ್ಪ ಲಿಗಾಡೆಯವರೊಂದಿಗೆ ವಿವಾಹವಾದ ನಂತರ ಜಯದೇವಿತಾಯಿ ಲಿಗಾಡೆಯೆನಿಸಿಕೊಂಡರು. ಅವರ ಆರಾಧ್ಯದೈವ ಸೊನ್ನಲಿಗೆಯ ಸಿದ್ಧರಾಮ. ಹಾಗಾಗಿ ಬಾಲ್ಯದಿಂದಲೂ ಶರಣರ, ಸಂತರ ಬದುಕು, ಬರಹಗಳ ಬಗ್ಗೆ ಅತಿಯಾದ ಆಸಕ್ತಿಯನ್ನು ಹೊಂದಿದ್ದ ಜಯದೇವಿಯವರಿಗೆ ಲಿಂಗಪೂಜೆಯಲ್ಲಿ ಅಪಾರ ಶ್ರದ್ಧೆಯಿತ್ತು. ಶರಣರ ಬದುಕಿನ ಧ್ಯೇಯವಾದ ಸರಳ ಜೀವನ, ಕಾಯಕ ಶ್ರದ್ಧೆ ಅವರಿಗೆ ಮಾರ್ಗದರ್ಶೀ ಸೂತ್ರಗಳಾಗಿದ್ದುವು.

ಜಯದೇವಿಯವರು ತಮ್ಮ ಪ್ರಾರಂಭಿಕ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮರಾಠಿ ಭಾಷೆಯಲ್ಲಿಯೇ ಪಡೆದು ಎರಡು ಮಕ್ಕಳ ತಾಯಿಯಾದ ನಂತರವಷ್ಟೇ ಕನ್ನಡ ಭಾಷೆಯ ಪರಿಚಯವನ್ನು ಮಾಡಿಕೊಂಡರು. ಯಾವುದೇ ಶಾಸ್ತ್ರ ಸಾಹಿತ್ಯವನ್ನೂ ಕಲಿಯದಿದ್ದರೂ ಮನೆಯಲ್ಲಿ ನಡೆಯುತ್ತಿದ್ದ ಅಧ್ಯಾತ್ಮದ ಗೋಷ್ಠಿಗಳು ವಚನಸಾಹಿತ್ಯದ ಕಡೆಗೆ ಅವರ ಒಲವು ಹರಿಯುವಂತೆ ಮಾಡಿದ್ದುವು. ಕನ್ನಡ, ಮರಾಠಿ ಸಾಹಿತ್ಯದ ಅಧ್ಯಯನವನ್ನು ಮಾಡುವುದರೊಂದಿಗೆ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಭಾಗವಹಿಸುತ್ತಿದ್ದರು. ಗಾಂಧೀಜಿಯವರ ಪ್ರಭಾವದಿಂದ ತಾವೂ ಖಾದಿಧಾರಿಯಾಗಿ ಜನರಿಗೆ ಸ್ವಾತಂತ್ರ್ಯದ ಅರಿವು ನೀಡುವ ಭಾಷಣಗಳನ್ನು ಮಾಡುತ್ತ ಅವರಲ್ಲಿ ದೇಶಪ್ರೇಮವನ್ನು ಜಾಗೃತಿಗೊಳಿಸುವ ಕಾರ್ಯದಲ್ಲಿಯೂ ತೊಡಗಿರುತ್ತಿದ್ದರು. ಅತ್ಯಂತ ಶ್ರೀಮಂತ ಮನೆತನಕ್ಕೆ ಸೇರಿದ್ದರೂ ಅವರ ಉಡುಪು ಬಹಳ ಸರಳವಾಗಿಯೇ ಇರುತ್ತಿತ್ತು. ಸರಳ ಜೀವನಶೈಲಿ ಅವರಿಗೆ ಯಾವಾಗಲೂ ಪ್ರಿಯವಾಗಿತ್ತು. ಸರಳವಾದ ಬಿಳಿಯುಡಿಗೆ, ಢಾಳಾಗಿ ಎದ್ದು ಕಾಣುವ ಹಣೆಯ ಮೇಲಿನ ವಿಭೂತಿ, ಹಣೆಯ ಮಧ್ಯದಲ್ಲಿ ಚಿಕ್ಕ ಕುಂಕುಮದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿಯೆಂಬ ಆಭರಣ, ಶೋಭೆ ಹೆಚ್ಚಿಸುವಂತಿದ್ದ ಸಹಜವಾದ ಗೌರವರ್ಣ, ಮುಖದಲ್ಲಿ ಸದಾ ವಿರಾಜಿಸುತ್ತಿದ್ದ ಮಂದಹಾಸ – ಇದು ಅವರ ವ್ಯಕ್ತಿತ್ವದ ಸ್ಪಷ್ಟ ಪರಿಚಯ ನೀಡುವುದಲ್ಲದೆ ಗೌರವವನ್ನು ಮೂಡಿಸುತ್ತಿತ್ತು. 1946 ರಲ್ಲಿ ಅವರ ಪತಿಯು ನಿಧನರಾದ ನಂತರ ಸೊಲ್ಲಾಪುರವನ್ನು ಬಿಟ್ಟು ಕಲ್ಯಾಣಕ್ಕೆ ಹೋಗಿ ನೆಲೆಸಿದ ಜಯದೇವಿ ತಾಯಿಯವರು ಸಾಹಿತ್ಯಿಕ, ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಮಗ್ನರಾದರು.

ಕಲ್ಯಾಣದಲ್ಲಿ ಕೂಡ ತಮ್ಮ ಆರಾಧ್ಯದೈವವಾದ ಸಿದ್ಧರಾಮೇಶ್ವರರ ಗದ್ದುಗೆಯನ್ನು ಕಟ್ಟಿಸಿ ಸಂತಜೀವನವನ್ನು ನಡೆಸಲು ಅನುವಾದರು.ತಮ್ಮ ಸರಳ ಜೀವನದಿಂದ ಇತರರಿಗೆ ಆದರ್ಶಪ್ರಾಯರೆನಿಸಿದರು. ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಜಯದೇವಿಯವರು ಎರಡೂ ಭಾಷೆಗಳಲ್ಲಿಯೂ ಹಲವಾರು ಕೃತಿಗಳನ್ನು ರಚಿಸಿದರು. ಇಂದಿಗೂ ಹೊರನಾಡೆನಿಸಿಕೊಂಡೇ ಇರುವ ಗಡಿಪ್ರದೇಶದಲ್ಲಿ ಜನಿಸಿದ್ದರೂ ಅವರ ಕನ್ನಡಾಭಿಮಾನ ಅನನ್ಯವಾಗಿತ್ತು. ಕನ್ನಡದಲ್ಲಿ ಜನಪ್ರಿಯವಾದುವೆಂದರೆ ಜಯಗೀತೆ, ತಾಯಿಯ ಪದಗಳು, ಶ್ರೀ ಸಿದ್ಧರಾಮ ಪುರಾಣ, ತಾರಕ ತಂಬೂರಿ, ಬಂದೇವ ಕಲ್ಯಾಣಕ,

ಪುಟ 9 ಕ್ಕೆ ➢

# ರಾಷ್ಟ್ರೀಯ ವಿಜ್ಞಾನ ದಿನ

ಲಕ್ಷ್ಮೀಸಿಂಗ್ ಬಿ.
ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್
ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,
ಬೆಂಗಳೂರು –560 032
ದೂರವಾಣಿ ಸಂಖ್ಯೆ: 9980033636



ಭಾರತದ ಶ್ರೇಷ್ಠ ವಿಜ್ಞಾನಿ ಡಾ॥ ಚಂದ್ರಶೇಖರ್ ವೆಂಕಟರಾಮನ್ ಅಥವಾ ಸಿ.ವಿ ರಾಮನ್‌ರವರು 'ರಾಮನ್ ಎಫೆಕ್ಟ್' ಅನ್ನು ಕಂಡುಹಿಡಿದ ನೆನಪಿಗಾಗಿ ಫೆಬ್ರವರಿ 28ರಂದು ಭಾರತವು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸುತ್ತದೆ.

ರಾಮನ್‌ರವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸಭಾಂಗಣದಲ್ಲಿ ಕ್ರಿ.ಶ.1928ರ ಫೆಬ್ರವರಿ 28 ರಂದು ಮೊದಲ ಬಾರಿಗೆ 'ರಾಮನ್ ಎಫೆಕ್ಟ್' ಅವಿಷ್ಕಾರವನ್ನು ಪ್ರಪಂಚಕ್ಕೆ ತಿಳಿಸಿದರು. ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಷ್ಯಾದ ಮೊತ್ತ ಮೊದಲ ವಿಜ್ಞಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು ಈ ಅವಿಷ್ಕಾರದಿಂದಲೇ. 'ರಾಮನ್ ಎಫೆಕ್ಟ್' ಬೆಳಕಿನ ಚದುರುವಿಕೆಯ ಕ್ಷೇತ್ರದಲ್ಲಿ ಪ್ರಮುಖ ಅವಿಷ್ಕಾರವಾಗಿದೆ. ಬೆಳಕು ಪಾರದರ್ಶಕ ವಸ್ತುವಿನ ಮೂಲಕ ಹಾದು ಹೋದಾಗ ಅದರಲ್ಲಿ ಕೆಲವು ಚದುರಿ ಹೋಗುತ್ತದೆ ಮತ್ತು ಚದುರಿದ ಬೆಳಕು ಅದರ ತರಂಗಾಂತರ ಮತ್ತು ವೈಶಾಲ್ಯವನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸುತ್ತದೆ ಎಂದು ಅವಿಷ್ಕಾರವು ಹೇಳುತ್ತದೆ. ಈ ಸಂಶೋಧನೆಯನ್ನು ಅವಿಷ್ಕಾರ ಮಾಡಿದ ದಿನವನ್ನೇ ಅಂದರೆ ಫೆಬ್ರವರಿ 28ರಂದು ಭಾರತವು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸುತ್ತದೆ.

ಮೊದಲ ರಾಷ್ಟ್ರೀಯ ವಿಜ್ಞಾನ ದಿನವನ್ನು 1987ರಲ್ಲಿ ಆಚರಿಸಲಾಯಿತು. ಸುಮಾರು ಆರು ದಶಕಗಳ ನಂತರ ಸರ್.ಸಿ.ವಿ ರಾಮನ್‌ರವರ 'ರಾಮನ್ ಎಫೆಕ್ಟ್' ಅವಿಷ್ಕಾರದ ಹಿನ್ನೆಲೆಯಲ್ಲಿ ನ್ಯಾಷನಲ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ ಕಮುನಿಕೇಷನ್ (NCSTC) ಫೆಬ್ರವರಿ 28ಅನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸುವಂತೆ ಸರ್ಕಾರವನ್ನು 1986ರಲ್ಲಿ ವಿನಂತಿಸಿತು. ತದನಂತರ 1987ರಿಂದ ಈ ಆಚರಣೆಯನ್ನು ಆಚರಿಸಲು ಪ್ರಾರಂಭಿಸಲಾಗಿದೆ. ಈ ದಿನವನ್ನು ಪ್ರತಿ ವರ್ಷ ಭಾರತೀಯ ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು ಮತ್ತು ಇತರ ಸಂಬಂಧಿತ ಸ್ಥಳಗಳಲ್ಲಿ ಆಚರಿಸಲಾಗುತ್ತದೆ.

ಈ ದಿನ ವಿಜ್ಞಾನ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆಗಾಗಿ ಅಥವಾ ವಿಜ್ಞಾನ ಮತ್ತು ಸಂವಹನವನ್ನು ಜನಪ್ರಿಯಗೊಳಿಸುವುದಕ್ಕಾಗಿ ಕೊಡುಗೆಗಳಾದ ಜನರಿಗೆ ಮತ್ತು ಸಂಸ್ಥೆಗಳಿಗೆ ರಾಷ್ಟ್ರೀಯ ವಿಜ್ಞಾನ ಜನಪ್ರಿಯತೆ ಪ್ರಶಸ್ತಿಗಳು ಹಸ್ತಾಂತರಿಸಲಾಗುವುದು. ರಾಷ್ಟ್ರೀಯ ವಿಜ್ಞಾನ ಪ್ರದರ್ಶನಗಳು ಮುಂತಾದ ಹಲವಾರು ಚಟುವಟಿಕೆಗಳನ್ನು ನಡೆಸಲಾಗುತ್ತದೆ.

'ಇಂಡಿಯನ್ ಇನ್‌ಸ್ಟ್ಯೂಟ್ ಆಫ್ ಸೈನ್ಸ್' ಆ ದಿನವನ್ನು 'ಓಪನ್ ಡೇ' ಅಂದರೆ ಸಾರ್ವಜನಿಕರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಪ್ರದರ್ಶನಗಳನ್ನು ಹಮ್ಮಿಕೊಳ್ಳುತ್ತಾರೆ. ವಿಶೇಷವಾಗಿ ಇಂಜನಿಯರಿಂಗ್ ಕಾಲೇಜುಗಳು ವಿಜ್ಞಾನದ ಕಾಲೇಜುಗಳಲ್ಲಿ ಹಬ್ಬದಂತೆ ಆಚರಿಸಲಾಗುತ್ತದೆ.

ರಾಷ್ಟ್ರೀಯ ವಿಜ್ಞಾನ ದಿನದ ಆಚರಣೆಯು ವಿಜ್ಞಾನವನ್ನು ಉತ್ತೇಜಿಸುವ ಮತ್ತು ಸಂಶೋಧನೆ ಮಾಡುವಂತೆ ಶ್ಲಾಘನೀಯ ಕೆಲಸವನ್ನು ಮಾಡುತ್ತಿರುವ ಜನರು, ವಿಜ್ಞಾನಿಗಳು, ಬರಹಗಾರರನ್ನು ಪ್ರೋತ್ಸಾಹಿಸುತ್ತದೆ. ಇದು ವೈಜ್ಞಾನಿಕ ಭ್ರಾತೃತ್ವಕ್ಕೆ ಜನರೊಂದಿಗೆ ಮತ್ತು ಸರ್ಕಾರದೊಂದಿಗೆ ಸಂವಹನ ನಡೆಸಲು ಮತ್ತು ವಿಜ್ಞಾನದ ಉಪಯುಕ್ತತೆ ಮತ್ತು ಅದರ ಬೆಳವಣಿಗೆಯ ಸಂಭವನೀಯ ವಿಸ್ತಾರದ ಬಗ್ಗೆ ತಿಳಿಸಲು ವೇದಿಕೆಯನ್ನು ಒದಗಿಸುತ್ತದೆ. ವಿಜ್ಞಾನವು ಬೆಳವಣಿಗೆಯ ಮಿತಿಯಿಲ್ಲದ ಸಾಧ್ಯತೆಗಳನ್ನು ಒದಗಿಸುತ್ತದೆ ಮತ್ತು ದಿನನಿತ್ಯದ ಜೀವನವನ್ನು ಹೆಚ್ಚು ಆರಾಮದಾಯಕ ಮತ್ತು ಅನುಕೂಲಕರವಾಗಿ ಮಾಡುತ್ತದೆ.

ರಾಷ್ಟ್ರೀಯ ವಿಜ್ಞಾನ ದಿನವು ಒಟ್ಟು ಶ್ರೇಷ್ಠ ಭಾರತೀಯ ವಿಜ್ಞಾನಿ ಮತ್ತು ಅವರ ಮಹಾನ್ ಅವಿಷ್ಕಾರಗಳಲ್ಲಿ ಒಂದನ್ನು ಸ್ಮರಿಸುವುದು ಮಾತ್ರವಲ್ಲದೆ ನಮ್ಮ ದೈನಂದಿನ ಜೀವನದ ಭಾಗವಾಗಿ ವಿಜ್ಞಾನವನ್ನು ಉತ್ತೇಜಿಸುತ್ತದೆ. ಸಮಾಜದ ಪ್ರತಿಯೊಂದು ಅಂಶವೂ ವೈಜ್ಞಾನಿಕವಾದಾಗ ಬೆಳವಣಿಗೆ ಮತ್ತು ಸಮೃದ್ಧಿಯ ಫಲಿತಾಂಶವಾಗಿ ಸಮಾಜದ ವಿಧಾನಗಳು ಅನುಸರಿಸುತ್ತದೆ. ಆದ್ದರಿಂದ ಸರ್ಕಾರ ಮತ್ತು ಸಂಬಂಧಿಸಿದ ಇಲಾಖೆಗಳ ಸಂಪೂರ್ಣ ಬೆಂಬಲದೊಂದಿಗೆ ದಿನವನ್ನು ಆಚರಿಸಬೇಕು.

ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶ ವಿಜ್ಞಾನ, ಜೈವಿಕ ತಂತ್ರಜ್ಞಾನ, ವೈದ್ಯ ವಿಜ್ಞಾನ ಹೀಗೆ ಅನೇಕ ಕ್ಷೇತ್ರಗಳಲ್ಲಿ ಇಂದು ಭಾರತೀಯ ವಿಜ್ಞಾನಿಗಳು ಅಪಾರ ಸಾಧನೆ ಮಾಡಿದ್ದಾರೆ. ವಿಜ್ಞಾನದ ಬೆಳವಣಿಗೆ ಇನ್ನೂ ಪ್ರಾರಂಭಿಕ ಹಂತದಲ್ಲಿದ್ದ ಸ್ವಾತಂತ್ರ್ಯ ಪೂರ್ವದ ದಿನಗಳಿಂದ ಪ್ರಾರಂಭಿಸಿ ಇಂದಿನವರೆಗೆ ನಮ್ಮ ದೇಶ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯ ಪರಿಚಯವನ್ನು ಎಲ್ಲರಿಗೂ ಮಾಡಿಕೊಡುವುದು ಈ ಆಚರಣೆಯ ಇನ್ನೊಂದು ಆಶಯ.

ಪ್ರತಿವರ್ಷ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಚಟುವಟಿಕೆಗಳನ್ನು ಒಂದು ನಿರ್ದಿಷ್ಟ ವಿಷಯದ ಸುತ್ತ ಆಯೋಜಿಸಲಾಗುತ್ತದೆ. ಇಲ್ಲಿಯವರೆಗೂ ಹಲವು ವರ್ಷಗಳ ಥೀಮ್‌ಗಳು ಹೀಗಿವೆ.

1999– ದೈನಂದಿನ ಜೀವನದಲ್ಲಿ ರಸಾಯನ ಶಾಸ್ತ್ರ.

2000– ಮೂಲ ವಿಜ್ಞಾನದಲ್ಲಿ ಆಸಕ್ತಿಯನ್ನು ಮರು ಸೃಷ್ಟಿಸುವುದು.

2001– ವಿಜ್ಞಾನ ಶಿಕ್ಷಣಕ್ಕಾಗಿ ಮಾಹಿತಿ ತಂತ್ರಜ್ಞಾನ.

2002– ತ್ಯಾಜ್ಯದಿಂದ ಸಂಪತ್ತು.

2003– 50 ವರ್ಷಗಳ ಡಿಎನ್ಎ ಮತ್ತು 25 ವರ್ಷಗಳ ಐವಿಎಫ್ "ದಿ ಬ್ಲೂ ಪ್ರಿಂಟ್ ಆಫ್ ಲೈಫ್"

2004– ಸಮುದಾಯದಲ್ಲಿ ವೈಜ್ಞಾನಿಕ ಅರಿವು.

2005– ಸೆಲೆಬ್ರೇಟಿಂಗ್ ಫಿಸಿಕ್ಸ್.

2006– ನಮ್ಮ ಭವಿಷ್ಯಕ್ಕಾಗಿ ಪ್ರಕೃತಿಯನ್ನು ಪೋಷಿಸಿ.

2007– ಮೋರ್ ಕ್ರಾಫ್ ಪರ್ ಡ್ರಾಪ್

2008– ಭೂಗ್ರಹವನ್ನು ಅರ್ಥಮಾಡಿಕೊಳ್ಳುವುದು.

ಪುಟ 9 ಕ್ಕೆ ➤

## ಬೆಂಗಳೂರು ದಕ್ಷಿಣ ಜಿಲ್ಲೆ – ಸಂಕಲ್ಪ ದಿವಸ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ವಿಭಾಗದ ವತಿಯಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಕಾಡುಗೋಡಿ ಇಲ್ಲಿ ಕರ್ತವ್ಯ ಬೋಧ ದಿವಸವನ್ನು ಆಚರಿಸಲಾಯಿತು. ವಿಶೇಷ ಉಪನ್ಯಾಸ ನೀಡಿದ ಡಾ॥ ವೆಂಕಟರಮಣ ದೇವರು ಭಟ್ಟರವರು ಕರ್ತವ್ಯ ಬೋಧ ದಿವಸದ ಆಚರಣೆಯ ಹಿನ್ನೆಲೆ, ಮಹತ್ವ, ಭಾರತ ದೇಶದ ಹಿರಿಮೆ, ಈ ದೇಶಕ್ಕೆ ಸ್ವಾಮಿ ವಿವೇಕಾನಂದರ ಮತ್ತು ಸುಭಾಸ್ ಚಂದ್ರ ಬೋಸ್‌ರವರ ಕೊಡುಗೆಗಳನ್ನು ವಿವರಿಸುತ್ತ ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮತ್ತು ಕರ್ತವ್ಯಗಳ ಬಗ್ಗೆ ತಿಳಿಸಿಕೊಟ್ಟರು. ಕಾರ್ಯಕ್ರಮದ ಆರಂಭದಲ್ಲಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು. ದೀಪ ಬೆಳಗಿಸಿ ಭಾರತ ಮಾತೆ, ಸುಭಾಸ್ ಚಂದ್ರ ಬೋಸ್ ಮತ್ತು ಸ್ವಾಮಿ ವಿವೇಕಾನಂದರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಉಪಪ್ರಾಂಶುಪಾಲರಾದ ಶ್ರೀ ಮುನಿರಾಜುರವರು ಸ್ವಾಗತ ಕೋರಿದರು. ಶ್ರೀ ಮಾರೇಗೌಡರವರು ಸಂಕಲ್ಪ ವಿಧಿ ಬೋಧಿಸಿದರು. ಶ್ರೀ ಚನ್ನ ಕೃಷ್ಣಪ್ಪರವರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ಮಂಜುನಾಥ ಬಿ ಕೆರವರು ವಂದನಾರ್ಪಣೆ ಮಾಡಿದರು. ವೇದಿಕೆಯ ಮೇಲೆ ಶ್ರೀ ಯೋಗೇಶ ಸಿ.ಆರ್. ಪಿ ಕಾಡುಗೋಡಿ ಕ್ಲಸ್ಟರ್ ಹಾಗೂ ಶ್ರೀಮತಿ ಸುಮಿತ್ರ ಅಧ್ಯಕ್ಷರು ಎಸ್.ಡಿ.ಎಂ.ಸಿ ರವರು ಉಪಸ್ಥಿತರಿದ್ದರು. ವಿವಿಧ ಶಾಲೆಗಳಿಂದ ಶಿಕ್ಷಕರು ಭಾಗವಹಿಸಿದ್ದರು. ಶ್ರೀಮತಿ ಇಂದ್ರಾಣಿ ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

## ಮೈಸೂರು ಸಂಕಲ್ಪ ದಿವಸ್

7/01/2023ರಂದು ಕೆ ಆರ್ ಎಂ ಎಸ್ ಎಸ್ ಮೈಸೂರು ಜಿಲ್ಲಾ ಘಟಕವತಿಯಿಂದ ಸ್ವಾಮಿ ವಿವೇಕಾನಂದರು ಹಾಗೂ ನೇತಾಜಿ ಸುಭಾಷ್ ಚಂದ್ರಭೋಸ್ ರ ಜನ್ಮ ದಿನಾಚರಣೆಯ ನಿಮಿತ್ತ ಕರ್ತವ್ಯ ಬೋಧ ದಿವಸ ಕಾರ್ಯಕ್ರಮವನ್ನು ಗೋಪಾಲ ಸ್ವಾಮಿವಿದ್ಯಾಸಂಸ್ಥೆ ಮೈಸೂರು ಇಲ್ಲಿ ಆಯೋಜಿಸಲಾಗಿದ್ದು ಕಾರ್ಯಾಕ್ರಮದ ವೇದಿಕೆಯ ಅಧ್ಯಕ್ಷತೆಯನ್ನು ಶ್ರೀ ಅರುಣ್ ಕುಮಾರ್ ಸಂಘಟನಾ ಕಾರ್ಯದರ್ಶಿ KRMSS ಇವರು ಹಾಗೂ ಮುಖ್ಯ ಅತಿಥಿ ಹಾಗೂ ಭಾಷಣಕಾರರಾಗಿ ಶ್ರೀ ಮಂಜುನಾಥರವರು ಗೋಪಾಲಸ್ವಾಮಿ ವಿದ್ಯಾಸಂಸ್ಥೆಯ ಆಡಳಿತ ಅಧಿಕಾರಿಗಳ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾಪ್ರಧಾನ ಕಾರ್ಯದರ್ಶಿ ಶ್ರೀ ಉದಯರವಿಪ್ರಕಾಶ್. ಸಹಸಂಘಟನಾ ಕಾರ್ಯದರ್ಶಿ ಶ್ರಿ ವಿಜಯಕುಮಾರ್ NP ಹಾಗೂ ಕೆಂಪಯ್ಯ ಉಪಸ್ಥಿತರಿದ್ದರು. ವಿಶೇಷವಾಗಿ ಪ್ರೌಢಶಾಲಾ ಶಿಕ್ಷಕರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದು ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ. ಇದು ಕಾರ್ಯಕ್ರಮದ ಅಧ್ಯಕ್ಷರಾದ ಅರುಣ್ ಕುಮಾರ್‌ರವರ ವೈಯಕ್ತಿಕ ಸಂಪರ್ಕದಿಂದ ಎಂದು ತಿಳಿಸಲು ಹರ್ಷಿಸುತ್ತೇವೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ(ರಿ).ಬೆಂಗಳೂರು.

## ಮಾನ್ಯ ಮುಖ್ಯ ಮಂತ್ರಿಗಳೊಂದಿಗೆ ಸಭೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಸಂದೀಪ್ ಬೂದಿಹಾಳ. ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಚಿದಾನಂದ ಪಾಟೀಲ, ಕೋಶಾಧ್ಯಕ್ಷರಾದ ಜೆ.ಎಂ.ಜೋಷಿ, ಸಹ ಪ್ರಧಾನ ಕಾರ್ಯದರ್ಶಿಗಳಾದ ಗಂಗಾಧರ ಆಚಾರಿ, ವಿಭಾಗ ಪ್ರಮುಖರಾದ ಬಿ.ಎ.ಸುರೇಂದ್ರ. ಇವರನ್ನು ಒಳಗೊಂಡ ನಿಯೋಗ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ. ಶಿಕ್ಷಕರ ಮತ್ತು ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚೆ ಮಾಡಲಾಯಿತು. ಮಾನ್ಯ ಮುಖ್ಯ ಮಂತ್ರಿಗಳು ಧನಾತ್ಮಕವಾಗಿ ಸ್ಪಂದಿಸಿದರು.

## ಕರ್ನಾಟಕ ರಾಜ್ಯ ಮಹಾವಿದ್ಯಾನಿಲಯ ಶಿಕ್ಷಕ ಸಂಘ ವಿವಿಗಳಲ್ಲಿ ದೇಶೀಯ ಚಿಂತನೆ ಇದ್ದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ

ವಿಶ್ವವಿದ್ಯಾನಿಲಯಗಳಲ್ಲಿ ದೇಶೀಯ ಚಿಂತನೆ ಇದ್ದಾಗ, ಸಂಸ್ಕಾರ ಪರ ಚಿಂತನೆಯಿದ್ದಾಗ ಮಾತ್ರ ವಿದ್ಯಾರ್ಥಿಗಳಲ್ಲಿ ಅದನ್ನು ನಿರೀಕ್ಷಿಸಲು ಸಾಧ್ಯ. ಅಧ್ಯಾಪಕರು ತಮ್ಮ ಹೊಣೆಗಾರಿಕೆ ಅರಿತಾಗ, ಶಾಲೆ–ಕಾಲೇಜುಗಳ ಬಗ್ಗೆ ಜನರಲ್ಲಿ ಗೌರವ ಮೂಡಿದಾಗ ಮಾತ್ರ ನಾವು ದೇಶದ ಅಭಿವೃದ್ಧಿಯನ್ನು ನಿರೀಕ್ಷಿಸಬಹುದು ಎಂದು ಕರ್ನಾಟಕ ರಾಜ್ಯ ಮಹಾವಿದ್ಯಾನಿಲಯ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಡಾ. ರಘು ಅಕ್ಮಂಜಿ ಅಭಿಪ್ರಾಯಪಟ್ಟರು.

ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜಿನ ಡಾ. ಶಿವರಾಮ ಕಾರಂತ ಸಭಾಭವನದಲ್ಲಿ ಬುಧವಾರ ಕರ್ನಾಟಕ ರಾಜ್ಯ ಮಹಾವಿದ್ಯಾನಿಲಯ ಶಿಕ್ಷಕ ಸಂಘದ ಮಂಗಳೂರು ವಿಶ್ವವಿದ್ಯಾನಿಲಯ ವಿಭಾಗದ ವತಿಯಿಂದ ನಡೆ ಕರ್ತವ್ಯ ಬೋಧ ದಿವಸ್ ಮತ್ತು ಸಿಂಡಿಕೇಟ್ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೆಆರ್‌ಎಂಎಸ್‌ಎಸ್ ಅಧ್ಯಾಪಕರ ಶ್ರಮವನ್ನು ಗುರುತಿಸಿ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ ಸುಬ್ರಹ್ಮಣ್ಯ ಯಡಪಡಿತ್ತಾಯ, ನಾವು ಯಾವುದೇ ಹುದ್ದೆಯಲ್ಲೂ ಶ್ರೇಷ್ಠ ಸಾಮರ್ಥ್ಯ ತೋರಿದಾಗ, ಕರ್ತವ್ಯ ಪ್ರಜ್ಞೆ ಇದ್ದಾಗ ಮಾತ್ರ ರಾಷ್ಟ್ರ ನಿರ್ಮಾಣ ಸಾಧ್ಯ. "ಮಂಗಳೂರು ವಿಶ್ವವಿದ್ಯಾನಿಲಯದ ಸಾಧನೆಯಲ್ಲಿ ಸರ್ಕಾರದಿಂದ ನೇಮಕವಾದ ಆರು ಮಂದಿ ಮತ್ತು ರಾಜ್ಯಪಾಲರಿಂದ ನಾಮಾಂಕಿತಗೊಂಡ ಇಬ್ಬರು ಸಿಂಡಿಕೇಟ್ ಸದಸ್ಯರು ಮತ್ತು ಅಧಿಕಾರಿ ವರ್ಗದ ಪಾಲು ದೊಡ್ಡದಿದೆ" ಎಂದು ಸ್ಮರಿಸಿಕೊಂಡರು.

ಇದೇ ವೇಳೆ ಕೆಆರ್‌ಎಂಎಸ್‌ಎಸ್ ಮಂಗಳೂರು ವಿಶ್ವವಿದ್ಯಾನಿಲಯ ವಿಭಾಗದ ವತಿಯಿಂದ ಕುಲಪತಿ ಪ್ರೊ. ಪಿ ಸುಬ್ರಹ್ಮಣ್ಯ ಯಡಪಡಿತ್ತಾಯ, ಕುಲಸಚಿವ ಡಾ. ಕಿಶೋರ್ ಕುಮಾರ್ ಸಿ.ಕೆ, ಕುಲಸಚಿವ (ಪರೀಕ್ಷಾಂಗ) ಡಾ. ರಾಜು ಕೃಷ್ಣ ಚಲ್ಲಣ್ಣವರ್, ಪೂರ್ವತನ ಕುಲಸಚಿವ(ಪರೀಕ್ಷಾಂಗ) ಪ್ರೊ. ಪಿ ಎಲ್ ಧರ್ಮ, ಹಣಕಾಸು ಅಧಿಕಾರಿ ಡಾ. ಸಂಗಪ್ಪ ವೈ. ಸಿಂಡಿಕೇಟ್ ಸದಸ್ಯರಾದ ರಮೇಶ್ ಕೆ, ರವಿಚಂದ್ರ ಪಿ ಎಂ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ರಮೇಶ್ ಕೆ ಮತ್ತು ರವಿಚಂದ್ರ ಪಿ ಎಂ ವಿಶ್ವವಿದ್ಯಾನಿಲಯ ವಿದ್ಯಾರ್ಥಿಪರ ಮತ್ತು ಪ್ರಾಧ್ಯಾಪಕರ ಪರ ಇರುವಂತೆ ನಾವು ಶ್ರಮಿಸಿದ್ದೇವೆ ಎಂದರಲ್ಲದೆ ಕುಲಪತಿ, ಅಧಿಕಾರಿಗಳ ಧನಾತ್ಮಕ ನಿಲುವನ್ನು ಪ್ರಶಂಸಿಸಿದರು. ಕುಲಸಚಿವ ಡಾ. ಕಿಶೋರ್‌ಕುಮಾರ್ ಸಿ. ಕೆ ಮಾತನಾಡಿ ಸಿಂಡಿಕೇಟ್ ಸದಸ್ಯರು ವಿವಿಯ

ಪುಟ 8 ಕ್ಕೆ ➢

➢ ಪುಟ 7 ರಿಂದ.....

ಘನತೆಗೆ ಕುಂದು ಬರದಂತೆ, ಕಾನೂನಿನ ಚೌಕಟ್ಟಿನೊಳಗೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನೆರವಾಗಿದ್ದಾರೆ ಎಂದರು. ಪೂರ್ವತನ ಕುಲಸಚಿವ (ಪರೀಕ್ಷಾಂಗ) ಪ್ರೊ. ಪಿ ಎಲ್ ಧರ್ಮ ಮಾತನಾಡಿ, ವಿವಿಯ ಕಷ್ಟಕಾಲದಲ್ಲಿ ಸಿಂಡಿಕೇಟ್ ನೆರವಾಯಿತು. " ನಾನು ಕಣ್ಣೀರು ಸುರಿಸುವ ಪರಿಸ್ಥಿತಿ ಬಂದಾಗ, ರಾಜೀನಾಮೆ ನೀಡಿದಾಗ ಕುಲಪತಿ ಸ್ವಾರ್ಥವಿಲ್ಲದೆ ಕೆಲಸ ಮಾಡಿದ ಸಿಂಡಿಕೇಟ್ ಸದಸ್ಯರು ಧೈರ್ಯ ತುಂಬಿದರು." ಎಂದರು. ವಿವಿ ಕಾಲೇಜಿನ ಪ್ರಾಂಶುಪಾಲೆ ಡಾ. ಅನಸೂಯ ರೈ ಸಂಧ್ಯಾ ಕಾಲೇಜಿನ ಪ್ರಾಂಶುಪಾಲೆ ಡಾ. ಲಕ್ಷ್ಮೀ ದೇವಿ ಮೊದಲಾದವರು ಉಪಸ್ಥಿತರಿದ್ದರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಮಾಧವ ಎಂ ಕೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಘದ ಕಾರ್ಯದರ್ಶಿ ವೆಂಕಟೇಶ್ ನಾಯಕ್ ಧನ್ಯವಾದ ಸಮರ್ಪಿಸಿದರು. ಡಾ. ಸುಭಾಷಿಣಿ ಶ್ರೀವತ್ಸ, ಡಾ. ಸುಧಾ ಎನ್, ವೈದ್ಯ ಡಾ. ಯತೀಶ್ ಕುಮಾರ್ ಸನ್ಮಾನ ಪತ್ರ ವಾಚಿಸಿದರು. ಸಂಧ್ಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಿಕೆ ಆಶಾಲತಾ ಕಾರ್ಯಕ್ರಮ ನಿರೂಪಿಸಿದರು.

## ಬೆಂಗಳೂರು ಉತ್ತರ ಜಿಲ್ಲೆ ಫೋನ್ ಇನ್ ಉದ್ಘಾಟನಾ ಸಮಾರಂಭ

ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಉತ್ತಮ ಪಡಿಸಲು ವಿದ್ಯಾರ್ಥಿಗಳ ಪಠ್ಯದ ಸಮಸ್ಯೆಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಪರಿಹಾರಕ್ಕಾಗಿ "ಫೋನ್ ಇನ್ ಕಾರ್ಯಕ್ರಮ"ವನ್ನು ಆಯೋಜಿಸಿದ್ದು, ಇಂದು ಬೆಂಗಳೂರು ಉತ್ತರ ಜಿಲ್ಲೆಯ ಉಪನಿರ್ದೇಶಕರಾದ ಶ್ರೀ ಲೋಹಿತಾಶ್ವ ರೆಡ್ಡಿ, ಶಿಕ್ಷಣಾಧಿಕಾರಿಗಳಾದ ಶ್ರೀ ವಿ. ರಮೇಶ ಮತ್ತ ಶ್ರೀಮತಿ ಪಂಕಜಾ ಅವರು ಮತ್ತು ವಿಷಯ ಪರಿವೀಕ್ಷಕರಾದ ಶ್ರೀ.ಮಂಜುನಾಥ, ಶ್ರೀ ರಾಮಲಿಂಗೇಗೌಡ ಮತ್ತು ವೆಂಕಟೇಶ ಬಾಬು ಹಾಗೂ ಮಾಧ್ಯಮಿಕ ಶಿಕ್ಷಕ ಸಂಘ ದ ಪದಾಧಿಕಾರಿಗಳು ಉದ್ಘಾಟಿಸಿದರು.

## ಫೋನ್ ಇನ್ ಉದ್ಘಾಟನೆ–ಬೆಂಗಳೂರು ದಕ್ಷಿಣ ಜಿಲ್ಲೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಉಪನಿರ್ದೇಶಕರು ಬೆಂಗಳೂರು ದಕ್ಷಿಣ ಜಿಲ್ಲೆಯ ಇವರ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗಾಗಿ ಫೋನ್ ಇನ್ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮವು ಜರುಗಿತು. ಶಿಕ್ಷಣಾಧಿಕಾರಿಗಳಾದ ಶ್ರೀ ಎನ್. ವೆಂಕಟೇಶ್ ಮತ್ತು ಶ್ರೀ ಸಿ.ಹೆಚ್. ಮತ್ತಯ್ಯರವರು ಉದ್ಘಾಟಿಸಿ, ಸಂಘವು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮ ಪಡಿಸಲು ಹಾಗೂ ಸಂದೇಹವನ್ನು ನಿವಾರಿಸಿ ಧೈರ್ಯ ತುಂಬಲು ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಿ ಉತ್ತಮ ಕಾರ್ಯವನ್ನು ಮಾಡುತ್ತಿದೆ. ಇದರ ಪ್ರಯೋಜನವನ್ನು ಎಲ್ಲ ವಿದ್ಯಾರ್ಥಿಗಳು ಪಡೆಯುವಂತಾಗಲು ಸಂಬಂಧಿಸಿದ ಎಲ್ಲ ಅಧಿಕಾರಿಗಳೂ ಕ್ರಮವಹಿಸಬೇಕು ಎಂದು ಹೇಳಿದರು. ದಕ್ಷಿಣ ಜಿಲ್ಲೆಯ ಕಾರ್ಯದರ್ಶಿಗಳಾದ ಡಾ॥ ವೆಂಕಟರಮಣ ದೇವರು ಭಟ್ಟರವರು ನಿರೂಪಣೆ ಮಾಡಿ ಗಣ್ಯರಿಗೆ ಸ್ವಾಗತ ಕೋರಿ ಸಂಘದ ಕಾರ್ಯ ಚಟುವಟಿಕೆಗಳ ಪರಿಚಯ ಮಾಡಿದರು. ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ರವರು ಮಾತನಾಡಿ – ಸಂಘವು ಕಳೆದ ಆರು ವರ್ಷಗಳಿಂದ ಫೋನ್ ಇನ್ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. ಇದು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಫಲಿತಾಂಶವನ್ನು ಉತ್ತಮ ಪಡಿಸಲು ಪೂರಕ ಯೋಜನೆಯಾಗಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳ ಹಾಗೂ ಪೋಷಕರ ಅಭಿಪ್ರಾಯವಾಗಿದೆ. ಎಲ್ಲ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ – ಎಂದು ತಿಳಿಸಿದರು. ಸರ್ಕಾರಿ ಪ್ರೌಢ ಶಾಲೆ ಕಾಡುಗೋಡಿಯ ಉಪಪ್ರಾಂಶು ಪಾಲರಾದ ಶ್ರೀ ಮುನಿರಾಜು ರವರು ವಂದನಾರ್ಪಣೆ ಮಾಡಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ವಿಷಯ ಪರಿವೀಕ್ಷಕರಾದ ಶ್ರೀ ಜಿಯಾ ಉಲ್ಲಾ (ಕನ್ನಡ), ಶ್ರೀ ಮಸ್ಸೂರ್ ಎಂ.(ಸಮಾಜ ವಿಜ್ಞಾನ), ಶ್ರೀ ಕೆಂಪೇಗೌಡ ಜಿ.(ಗಣಿತ), DYPC ಶ್ರೀಮತಿ ನಾಗಮಣಿ, APCO ಶ್ರೀಮತಿ ಚೇತನಾ ಹಾಗೂ ಶ್ರೀಮತಿ ಶಿಲ್ಪಕಲಾ, ECO ಗಳಾದ ಶ್ರೀಮತಿ ಶಾಂತಲಾ ಹೆಗಡೆ, ಶ್ರೀಮತಿ ಮೀನಾಕ್ಷಿ ಗಾಣಿಗೇರ ಹಾಗೂ ಶ್ರೀ ಗುರುರಾಜ ಮುಂತಾದ ಅಧಿಕಾರಿಗಳು ಪಾಲ್ಗೊಂಡರು. ಬೆಂಗಳೂರು ದಕ್ಷಿಣದ ಅಧ್ಯಕ್ಷರಾದ ಶ್ರೀ ಸುರೇಂದ್ರ, ಖಜಾಂಚಿಗಳಾದ ಶ್ರೀ ಚನ್ನ ಕೃಷ್ಣಪ್ಪರವರು, ವಿಷಯ ಪರಿಣತರಾದ ಶ್ರೀಮತಿ ಇಂದ್ರಾಣಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಭಾರತೀಯ ಜ್ಞಾನ ಪರಂಪರಾ ಪರಿಚಯ ಅಭಿಯಾನ ಕರ್ನಾಟಕ ಗುರುಕುಲ ಪ್ರಕಲ್ಪ

ಕರ್ನಾಟಕ ಗುರುಕುಲ ಪ್ರಕಲ್ಪವು ಮೂರು ಗುರುಕುಲ ಗಳನ್ನೊಳಗೊಂಡಿದೆ. ಪ್ರಬೋಧಿನೀ ಗುರುಕುಲ, ಮೈತ್ರೇಯೀ ಗುರುಕುಲ ಮತ್ತು ವೇದವಿಜ್ಞಾನಗುರುಕುಲ. ಈ ಮೂರು ಗುರುಕುಲಗಳು ಸೇರಿ ನವ್ಹಂಬರ್ 4, 5, 6 / 2022 ದಿನಗಳಂದು ರಾಷ್ಟ್ರಿಯ ಗುರುಕುಲ ಸಂಗೋಷ್ಠಿಯನ್ನು ಯಶಸ್ವಿಯಾಗಿ ಆಯೋಜಿಸಿತು. ಇದರ ಮುಂದುವರಿದ ಭಾಗವಾಗಿ, ಕರ್ನಾಟಕದ ಒಟ್ಟು ಹದಿನೆಂಟು ಜಿಲ್ಲೆಗಳಲ್ಲಿ ವಿದ್ಯಾಭಾರತಿಯ ಸಹಯೋಗದಿಂದ ಭಾರತೀಯ ಜ್ಞಾನಪರಂಪರಾ ಪರಿಚಯ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ದಿನಾಂಕ 13/02/2023–17/02/2023 ರ ವರೆಗೆ ನಡೆದ ಈ ಅಭಿಯಾನದಲ್ಲಿ ಶಾಲಾ ವಿದ್ಯಾರ್ಥಿಗಳು, ಪಾಲಕರು, ಅಧ್ಯಾಪಕ ಅಧ್ಯಾಪಕಿಯರು ಮತ್ತು ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದ್ದರು. ವಿಶೇಷವಾಗಿ

**ಚತುರ್ವೇದಾಃ ಪುರಾಣಾನಿ ಸರ್ವೋಪನಿಷದಸ್ತಥಾ ।**
**ರಾಮಾಯಣಂ ಭಾರತಂ ಚ ಗೀತಾ ಸದ್ದರ್ಶನಾನಿ ಚ ।**
**ಜೈನಾಗಮಾಃ ತ್ರಿಪಿಟಕಾಃ ಗುರುಗ್ರಂಥಃ ಸತಾಂ ಗಿರಃ ।**
**ಏಷಃ ಜ್ಞಾನನಿಧಿಃ ಶ್ರೇಷ್ಠಃ ಶ್ರದ್ಧೇಯೋ ಹೃದಿ ಸರ್ವದಾ ।**

ಎಂದು ನಾವು ನಿತ್ಯವೂ ಹೇಳುವ ಭಾರತಭಕ್ತಿ ಸ್ತೋತ್ರ. ಇದನ್ನೇ ಭಾರತೀಯ ಜ್ಞಾನ ಪರಂಪರೆ ಎಂದೂ ಹೇಳುತ್ತಾರೆ. ಇವುಗಳಲ್ಲಿಯೇ ಭಾರತದ ಆತ್ಮವಾದ ಧರ್ಮದ ರಹಸ್ಯ ನೆಲೆಸಿದೆ. ಇಂತಹ ಭಾರತೀಯ ವಾಙ್ಮಯಗಳ ಪರಿಚಯ ಯುವಜನಾಂಗಕ್ಕೆ ಆಗುವ ಆವಶ್ಯಕತೆ ಇದೆ ಎಂದು ಮನಗಂಡ ಗುರುಕುಲದ ಹಿರಿಯರು ಇದನ್ನು ಅಭಿಯಾನದ ರೀತಿಯಲ್ಲಿ ಮಾಡಬೇಕೆಂದು ನಿರ್ದೇಶಿಸಿದ ಹಿನ್ನೆಲೆಯಲ್ಲಿ, ಈ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ಭಾರತೀಯ ವಾಙ್ಮಯಗಳ ಆಳ ಅಗಲವನ್ನು ಅರಿತರೆ ಯುವಜನತೆ ಈ ಮಾರ್ಗಕ್ಕೆ ಅಧ್ಯಯನಕ್ಕೆ ಪ್ರೇರಣೆ ಪಡೆಯುತ್ತಾರೆ. ಇದರಿಂದಲೇ ವಿದ್ಯೆ ಉಳಿಯಲು ಸಾಧ್ಯ ಎಂಬುದು ಇದರ ಹಿಂದಿನ ಘನ ಉದ್ದೇಶ. ಈಗಾಗಲೇ 13 ಜಿಲ್ಲೆಗಳಲ್ಲಿ

ಪುಟ 10 ಕ್ಕೆ ➢

➢ ಪುಟ 4 ರಿಂದ.....

ಸರಯೂ, ಸರಸ್ವತೀ ಮತ್ತು ಸಿಂಧು ನದಿಗಳು ಅವುಗಳ ಜಲತರಂಗಗಳೊಂದಿಗೆ ನಮ್ಮ ರಕ್ಷಣೆಗೆ ಬರಲಿ. ಈ ದಿವ್ಯ ಮಾತೆಯರು ನೀರಿನಲ್ಲಿ ತಮ್ಮ ಮಾತೃತ್ವದೊಡನೆ ಬೆಣ್ಣೆ ಮತ್ತು ಜೇನನ್ನು ಬೆರಸಿ ಕೊಡಲಿ ಎಂಬುದು ಗಯ ಪ್ಲಾತ ಋಷಿಯ ಪ್ರಾರ್ಥನೆ. ಹೀಗೆ ಜನರ ಜೀವನಾಡಿಯಾಗಿ, ಜೀವನಾಧಾರವಾಗಿದ್ದ ಈ ನದಿಯು ಕ್ರಿ.ಪೂ 4000ದ ವೇಳೆಗೆ ಕಣ್ಣಿಗೆ ಕಾಣಸಿಗದಂತಾಗಿ, ಗುಪ್ತಗಾಮಿನಿಯಾಗಿ, ಮರಳುಗಾಡಿನಲ್ಲಿ ಕಳೆದುಹೋಯಿತು ಎನ್ನುತ್ತವೆ ಪಂಚಾವಿಂಶ ಬ್ರಾಹ್ಮಣ, ಜೈಮಿನೀಯ ಬ್ರಾಹ್ಮಣ ಮತ್ತು ಮಹಾಭಾರತ ಗ್ರಂಥಗಳು.

ಸರಸ್ವತಿ ನದಿಯ ಬಗ್ಗೆ ಇನ್ನಷ್ಟು ವಿಚಾರಗಳನ್ನು ತಿಳಿಯೋಣ.

ಋಗ್ವೇದದ ನಾರದೀಯ ಸೂಕ್ತವು

**ಇಮಂ ಮೇ ಗಂಗೆ ಯಮುನೆ ಸರಸ್ವತಿ ಶುತುದ್ರಿ ಸ್ತೋಮ**
**ಸಚತಾ ಪರುಷ್ಣ್ಯಾ।**
**ಆಸಿಕ್ನ್ಯಾ ಮರುದ್ವೃಧೇವಿತಸ್ತಯಾಜೀಕೀಯೆ ಶೃಣುಹಾ**
**ಸುಷೋಮಯಾ ॥**

(ಋ.ವೇ.10/75/5)

ಇಲ್ಲಿ ಹತ್ತು ನದಿಗಳ ಉಲ್ಲೇಖವನ್ನು ನಾವು ಕಾಣುತ್ತೇವೆ. 'ಓ ಗಂಗೆ, ಯಮುನೆ, ಶುತದ್ರಿ (ಸಟ್ಲೆಜ್), ಪರುಷ್ಣಿ (ಇರಾವತಿ, ರಾವಿ), ಆಸ್ಕಿನಿ (ಚೀನಾಬ್), ಮರುದ್ವೃಧಾ, ವಿತಸ್ತಾ (ಝೀಲಂ), ಆರ್ಜಿಕಿ (ಹಾರೊ), ಮತ್ತು ಸುಷೋಮ (ಸೋಹನ್) ನದಿಗಳೇ, ಈ ನನ್ನ ಪ್ರಾರ್ಥನೆಯನ್ನು ಸ್ವೀಕರಿಸಿ.'

ಋಗ್ವೇದದ ಮೊದಲನೆಯ ಅಷ್ಟಕದಲ್ಲಿ ಸರಸ್ವತಿಯನ್ನು ದೇವಿ ಮತ್ತು ನದಿ ಎರಡು ರೂಪಗಳಲ್ಲಿಯೂ ಚಿತ್ರಿಸಲಾಗಿದೆ.

'ನಮ್ಮೆಲ್ಲರನ್ನೂ ಪಾವನಗೊಳಿಸುವ, ಆಹಾರವನ್ನು ದಯಪಾಲಿಸುವ, ಪೂಜೆಯನ್ನು ತಕ್ಕ ಸಂಪತ್ತಿನೊಂದಿಗೆ ಪುರಸ್ಕರಿಸುವ, ನಾವು ನಮ್ಮ ಧರ್ಮವಾಗಿ ಅರ್ಪಿಸಿದ ಹವಿಸ್ಸಿನಿಂದ ಆಕರ್ಷಿತಳಾಗು.'

(ಋ.ವೇ. ಅಷ್ಟಕ 1/3/10–12)

➢ ಪುಟ 5 ರಿಂದ.....

ಸಾವಿರದ ಪದಗಳು ಮತ್ತು ಮಹಾವೀರ ವಾಣಿಯ ಹಿಂದೀ ಅನುವಾದ. ಇನ್ನು ಮರಾಠಿ ಭಾಷೆಯ ಕೃತಿಗಳೆಂದರೆ ಸಿದ್ಧವಾಣಿ, ಬಸವದರ್ಶನ, ಸಮೃದ್ಧ ಕರ್ನಾಟಕಕಾಚೀ ರೂಪರೇಷಾ, ಬಸವ ವಚನಾಮೃತ, ಸಿದ್ಧಲಿಂಗ ವಾಣಿ, ಅಣ್ಣ–ಬಸವಣ್ಣ–ಮಾಳವಾಡದರ ಲೇಖನದ ಮರಾಠೀ ಅನುವಾದ, ಶೂನ್ಯಸಂಪಾದನೆ – ಇವು ಪ್ರಮುಖವಾದುವು.

ಇವಲ್ಲದೆ ಹುತಾತ್ಮ ಶರಣರಾದ ಹರಳಯ್ಯ–ಮಾದಯ್ಯರ ಜೀವನಚರಿತ್ರೆಗಳನ್ನು 360 ಪದ್ಯಗಳಲ್ಲಿಯೂ, ನೀಲಮ್ಮನವರ 121 ವಚನಗಳನ್ನು ಮರಾಠಿ ಭಾಷೆಗೂ ಜಯದೇವಿತಾಯಿ ಅನುವಾದಿಸಿದ್ದಾರೆ. ಅಕ್ಕಮಹಾದೇವಿ ಪುರಾಣ, ಬಸವಣ್ಣನವರ 600 ವಚನಗಳ ಅನುವಾದ ಹಾಗೂ 819 ತ್ರಿಪದಿಗಳನ್ನೊಳಗೊಂಡ ಮರಾಠೀ ಅನುಭಾವಪದಗಳು, ಮರಾಠಿಯ ಛಂದಸ್ಸಿನ ಪದ್ಯಗಳಿಂದ ಕೂಡಿದ ಸಿದ್ಧರಾಮೇಶ್ವರ ಪುರಾಣ, (ಅಪ್ರಕಟಿತ)–ಹೀಗೆ ಇವರ ಸಾಹಿತ್ಯಸೇವೆ ಎರಡು ಭಾಷೆಗಳಲ್ಲಿಯೂ ಸಮೃದ್ಧವಾಗಿಯೇ ನಡೆದಿದೆ.

➢ ಪುಟ 6 ರಿಂದ.....

2009– ವಿಜ್ಞಾನದ ಹಾರಿಜಾನ್ಸ್‌ಅನ್ನು ವಿಸ್ತರಿಸುವುದು.

2010– ಲಿಂಗ ಸಮಾನತೆ, ವಿಜ್ಞಾನ ಮತ್ತು ತಂತ್ರಜ್ಞಾನ.

2011– ದೈನಂದಿನ ಜೀವನದಲ್ಲಿ ರಸಾಯನ ಶಾಸ್ತ್ರ.

2012– ಶುದ್ಧ ಶಕ್ತಿ ಪರ್ಯಾಯಗಳು ಮತ್ತು ಪರಮಾಣು ಶಕ್ತಿ.

2013– ತಳೀಯವಾಗಿ ಮಾರ್ಪಡಿಸಿದ ಬೆಳೆಗಳು ಮತ್ತು ಆಹಾರ ಭದ್ರತೆ.

2014– ವೈಜ್ಞಾನಿಕ ತಾಪಮಾನ ಮತ್ತು ಶಕ್ತಿಯ ಸಂರಕ್ಷಣೆಯನ್ನು ಉತ್ತೇಜಿಸಿ.

2015– ರಾಷ್ಟ್ರ ನಿರ್ಮಾಣ ವಿಜ್ಞಾನ.

2016– ಮೇಕ್ ಇನ್ ಇಂಡಿಯಾ; ಎಸ್ & ಟಿ ಚಾಲಿತ ನಾವೀನ್ಯತೆ

2017– ವಿಕಲಾಂಗ ವ್ಯಕ್ತಿಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ

2018– ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ.

2019– ವಿಜ್ಞಾನ ಜನರಿಗಾಗಿ ಮತ್ತು ಜನರಿಗಾಗಿ ವಿಜ್ಞಾನ

2020– ವಿಜ್ಞಾನದಲ್ಲಿ ಮಹಿಳೆಯರು.

2021– ಎಸ್‌ಟಿಐನ ಭವಿಷ್ಯ: ಶಿಕ್ಷಣ, ಕೌಶಲ್ಯ ಮತ್ತು ಕೆಲಸದ ಮೇಲೆ ಪರಿಣಾಮಗಳು.

2022– ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಂಯೋಜಿತ ವಿಧಾನ.

2023– "ಜಾಗತಿಕ ವೇದಿಕೆಯಲ್ಲಿ ಭಾರತದ ಉದಯೋನ್ಮುಕ ಪಾತ್ರ"

ಇವೆಲ್ಲ ಚಟುವಟಿಕೆಗಳಿಗೆ ಪುರಸ್ಕಾರವೆಂಬಂತೆ ಹಲವಾರು ಗೌರವದ ಸ್ಥಾನಗಳು ಜಯದೇವಿಯವರನ್ನು ಅರಸಿ ಬಂದುವು. 1934 ರಲ್ಲಿ ವೀರಶೈವ ಸಾಹಿತ್ಯ ಸಭೆಯ ಅಧ್ಯಕ್ಷ ಸ್ಥಾನ, 1946 ರಲ್ಲಿ 22 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಅಧಿವೇಶನದಲ್ಲಿ ಸ್ವಾಗತ ಭಾಷಣದ ಜವಾಬ್ದಾರಿ, ಮುಂತಾದುವಲ್ಲದೆ 1974 ರಲ್ಲಿ ಮಂಡ್ಯದಲ್ಲಿ ನಡೆದ 48 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಮೊದಲ ಮಹಿಳೆಯೆನಿಸಿದರು. ಇದಕ್ಕೂ ಮೊದಲು 1960 ರಲ್ಲಿ ಬೀದರಿನ 41 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಪರಿಷತ್ ಅಧ್ಯಕ್ಷರಾಗಿದ್ದರು.ಈ ಎಲ್ಲ ಪುರಸ್ಕಾರಗಳ ಜೊತೆಗೆ 1976 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಡಿ.ಲಿಟ್. ಪದವಿ ನೀಡಿ ಗೌರವಿಸಿತು. 1977 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ 1955 ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾಗಿಯೂ ನಾಮಕರಣಗೊಂಡಿದ್ದರು. ಶಿಕ್ಷಣತಜ್ಞರೂ ಆಗಿದ್ದ ಜಯದೇವಿಯವರು 1948 ರಲ್ಲಿ ಪ್ರೌಢಶಿಕ್ಷಣ ಸಮಿತಿಗೆ ನಿರೀಕ್ಷಕರಾಗಿ ನಾಮಕರಣಗೊಂಡಿದ್ದರು.

ಹೀಗೆ ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡೂ ರಾಜ್ಯಗಳ ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತ ತಮ್ಮದೇ ಛಾಪು ಮೂಡಿಸಿದವರು ಜಯದೇವಿತಾಯಿ ಲಿಗಾಡೆ. ಹೊರನಾಡಿನಲ್ಲಿದ್ದೂ ಕನ್ನಡದ ಕೈಂಕರ್ಯದ ಹೊಣೆ ಹೊತ್ತು ಅದನ್ನು ನಿಸ್ಪೃಹವಾಗಿ ಮಾಡಿದವರು.

●

# ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ದೆಹಲಿ

## ರಾಷ್ಟ್ರೀಯ ಕಾರ್ಯಕಾರಿಣಿ – ವರದಿ

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿಯ ಕೇಂದ್ರೀಯ ತಿಬ್ಬತಿ ಉಚ್ಚ ವಿಶ್ವವಿದ್ಯಾನಿಲಯ, ಸಾರಾನಾಥ, ಉತ್ತರ ಪ್ರದೇಶದಲ್ಲಿ ದಿನಾಂಕ 11.02.2023 ಮತ್ತು 12.2.2023 ರಂದು ಆಯೋಜಿಸಲಾಗಿತ್ತು.

ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾದುದು ಎಂದು ಕಾರ್ಯಕಾರಿಣಿಯ ಅಧ್ಯಕ್ಷತೆಯನ್ನು ವಹಿಸಿದ್ದ ಜೆ.ಪಿ ಸಿಂಘಾಲ್‌ಜೀಯವರು ಹೇಳಿದರು. ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಬೆಳೆಯುವಲ್ಲಿ ವಿದ್ಯಾಲಯ ಮತ್ತು ಮಹಾವಿದ್ಯಾಲಯಗಳ ಪಾತ್ರ ಬಹಳ ಪ್ರಮುಖ ಎಂದು ಹೇಳಿದರು. ವಿದ್ಯಾರ್ಥಿಗಳು ತಮ್ಮ ಶಿಕ್ಷಕರನ್ನು ಆದರ್ಶವನ್ನಾಗಿಟ್ಟು ಕೊಂಡಿರುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವುದರೊಂದಿಗೆ ಉತ್ತಮ ನಾಗರೀಕರನ್ನಾಗಿ ಮಾಡಲು ಪ್ರಯತ್ನಿಸುತ್ತಿರುತ್ತಾರೆ ಎಂದು ಹೇಳಿದರು.

ಕಾರ್ಯಕಾರಿಣಿಯಲ್ಲಿ ಅತಿಥಿಗಳಾಗಿ ಆಗಮಿಸಿದ ಜ್ಞಾನ ವತ್ಸಲ ಸ್ವಾಮಿಜೀಯವರು ಶಿಕ್ಷಕರು ವಿದ್ಯಾರ್ಥಿಗಳಿಗೆ ಪುಸ್ತಕದ ಜ್ಞಾನವನ್ನು ನೀಡುವುದರೊಂದಿಗೆ ಸಂಸ್ಕಾರಯುಕ್ತ ಶಿಕ್ಷಣವನ್ನು ಕೊಡಬೇಕು. ಪುಸ್ತಕ ಜ್ಞಾನದಿಂದ ವಿದ್ಯಾರ್ಥಿಗಳು ವಿಧ್ವಂಸಕರಾಗಿ ಬೆಳೆಯಬಹುದು, ಆದರೆ ಸಂಸ್ಕಾರ ಮತ್ತು ಆಧ್ಯಾತ್ಮದೊಂದಿಗೆ ಶಿಕ್ಷಣ ನೀಡಿದರೆ ಸಕಾರಾತ್ಮಕ ಶಕ್ತಿಯು ಹೆಚ್ಚಾಗಿ ಚರಿತ್ರವಂತರಾದ ನಾಗರೀಕರಾಗಬಹುದು. ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಡದಿದ್ದರೆ ಒಂದು ದಿನ ಸಂಪತ್ತಿನೊಂದಿಗೆ ಸಂತತಿಯನ್ನು ಕಳೆದುಕೊಳ್ಳಬೇಕಾಗಬಹುದೆಂದು ಸ್ವಾಮೀಜಿ ಹೇಳಿದರು. ಜ್ಞಾನವತ್ಸಲ ಸ್ವಾಮೀಜಿಯವರು ಒಬ್ಬ ಆಧ್ಯಾತ್ಮಿಕ ಮುಖಂಡರು ಮತ್ತು ಉತ್ತಮ ವಾಗ್ಮಿಗಳಾಗಿದ್ದು, ಬಾಪ್ಸ್(ಬೋಚಾಸನವಾಸಿ ಅಕ್ಷರ ಪುರುಷೋತ್ತಮ ಸ್ವಾಮೀನಾರಾಯಣ ಸಂಸ್ಥೆ) ನ ಮುಖಾಂತರ ಸಮಾಜ ಸುಧಾರಣೆಯ ಕೆಲಸವನ್ನು ಮಾಡುತ್ತಿದ್ದಾರೆ.

ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಸಹ ಸಂಘಟನಾ ಮಂತ್ರಿಗಳಾದ ಶ್ರೀ ಲಕ್ಷ್ಮಣ್‌ಜೀ, ಪಾಲಕರಾದ ಶ್ರೀ ಸುನೀಲ್ ಬಾಯಿ ಮೆಹೆತಾಜೀ, ರಾಷ್ಟ್ರೀಯ ಸಂಘಟನಾ ಮಂತ್ರಿಗಳಾದ ಶ್ರೀ ಮಹೇಂದ್ರಕಪೂರ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾ, ಮಹಿಳಾ ಕಾರ್ಯದರ್ಶಿ ಶ್ರೀಮತಿ ಮಮತಾ ಡಿ.ಕೆ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್, ಮಹಿಳಾ ಪ್ರಮುಖರಾದ ಶ್ರೀಮತಿ ರೋಹಿಣಿ ನಾಯಕ್‌ರವರು ಭಾಗವಹಿಸಿದ್ದರು.

## ಶಬ್ದಬ್ರಹ್ಮ

**ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ. 'ನೋಡು, ನೀನು ಭಜನೆ ಮತ್ತು ಸಂಗೀತವನ್ನು ಪ್ರೀತಿಸಬೇಕು. ಸಂಗೀತದ ಮೂಲಕವೂ ಭಗವಂತನನ್ನು ಸೇರಬಹುದು ಎಂಬುದನ್ನು ನೀನು ಎಂದೆಂದಿಗೂ ಮನಸ್ಸಿನಲ್ಲಿಟ್ಟುಕೋ. ಸಂಗೀತವು 'ಶಬ್ದಬ್ರಹ್ಮ'ವೇ ಆಗಿದೆ. ಒಬ್ಬ ವ್ಯಕ್ತಿ ಧ್ಯಾನದ ಮೂಲಕ ಇದನ್ನು ಅನುಭವಿಸುತ್ತಾನೆ.**

➢ ಪುಟ 8 ರಿಂದ.....

130 ಶಾಲೆಗಳಲ್ಲಿ ಅಭಿಯಾನ ಮುಗಿದಿದ್ದು ಉತ್ತಮ ಸ್ಪಂದನೆ ಸಿಕ್ಕಿದೆ. ಇದರ ಸಿದ್ಧತೆಯ ದೃಷ್ಟಿಯಿಂದ ಭಾರತೀಯ ಜ್ಞಾನಲೋಕ ಮತ್ತು ಗುರುಕುಲ ಶಿಕ್ಷಣದ ವೈಶಿಷ್ಟ್ಯ ಎಂಬ ಒಂದು ಕಿರು ಹೊತ್ತಿಗೆಯನ್ನು ಮುದ್ರಿಸಲಾಯಿತು. ನಾವು ಹೇಳುವ ವಿಷಯಗಳ ಪುನಃ ಸ್ಮರಣೆಗಾಗಿ ಒಂದು ಟಿಪ್ಪಣಿಯನ್ನೂ ಮುದ್ರಣ ಮಾಡಿ ನೀಡಲಾಯಿತು.

ಶಾಲೆಗಳಲ್ಲಿ ಸೂಚನಾ ಫಲಕದಲ್ಲಿ ಅಥವಾ ಗೋಡೆಗೆ ಅಂಟಿಸುವುದಕ್ಕೆ ಅನುಕೂಲವಾಗುವಂತೆ ಭಾರತೀಯ ವಾಙ್ಮಯಗಳ ಉಲ್ಲೇಖವಿರುವ ಒಂದು ದೊಡ್ಡ ಚಾರ್ಟ್ ಕೂಡ ಮಾಡಲಾಗಿತ್ತು.

ಸುಮಾರು ನಾಲ್ಕು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಏಳುನೂರಕ್ಕಿಂತ ಹೆಚ್ಚು ಅಧ್ಯಾಪಕರು ಇದರಲ್ಲಿ ಭಾಗವಹಿಸಿದ್ದರೆಂಬುದು ಉಲ್ಲೇಖನೀಯ. ಇದನ್ನು ಒಟ್ಟಾರೆ ನಿರ್ವಹಣೆ ಮಾಡಿದವರು ಯುವ ವಿದ್ವಾಂಸರು ಮತ್ತು ವಿದುಷಿಯರು ಎಂಬುದು ಆಕರ್ಷಣೆಯ ಕೇಂದ್ರವಾಗಿತ್ತು. ಈ ಅಭಿಯಾನಕ್ಕೆ ವಿಶೇಷವಾಗಿ ಆರ್ಥಿಕಸಹಯೋಗನ್ನು IKS (Inadian knowledge system) ವಿಭಾಗದಿಂದ ದೊರೆಯಿತು.

ಇದೇ ರೀತಿಯಲ್ಲಿ ಪ್ರತಿ ವರ್ಷವೂ ನಾವು ಶಾಲೆಗಳಲ್ಲಿ ಈ ಅಭಿಯಾನವನ್ನು ಹಮ್ಮಿಕೊಂಡರೆ ನಮ್ಮ ಭಾರತದ ಆತ್ಮವಾದ ಜ್ಞಾನಪರಂಪರೆ ಸುರಕ್ಷಿತವಾಗಿ ಇಡಬಹುದು ಎಂಬುದು ನಮ್ಮೆಲ್ಲರ ವಿಶ್ವಾಸ.

## ಕೊನೆಯ ಪರೀಕ್ಷೆ

ಒಬ್ಬ ಗುರುವಿದ್ದ. ಆತನ ಮೂವರು ಶಿಷ್ಯರ ವಿದ್ಯಾಭ್ಯಾಸ ಒಮ್ಮೆಲೇ ಮುಗಿಯಿತು. "ನಿಮಗೆ ಕೊನೆಯದೊಂದು ಪರೀಕ್ಷೆ ಮಾತ್ರವೇ ಉಳಿದಿವೆ, ಹೋಗುವಾಗ ಅದನ್ನು ಮಾಡುತ್ತೇನೆ" ಎಂದರು ಗುರುಗಳು.

ಹೋಗುವ ದಿನವೂ ಬಂದಿತು. ಶಿಷ್ಯರನ್ನು ಗುರು ಬೀಳ್ಕೊಟ್ಟರು. ಯಾವುದೇ ಪರೀಕ್ಷೆ ಮಾಡದುದನ್ನು ಕಂಡ ಆ ಶಿಷ್ಯರು, ಪ್ರಾಯಶಃ ಗುರುಗಳು ಪರೀಕ್ಷೆಯನ್ನು ಮರೆತಿರಬೇಕು ಎಂದುಕೊಂಡರು.

ಶಿಷ್ಯರು ಹೊರಟಾಗ ಸಾಯಂಕಾಲವಾಗಿತ್ತು. ದಾರಿಯಲ್ಲಿ ಪೊದೆಯೊಂದರ ಸಮೀಪ ಮುಳ್ಳುಗಳು ಬಿದ್ದಿರುವುದನ್ನು ಅವರು ಕಂಡರು. ಮೊದಲನೇ ಶಿಷ್ಯ ಜೋರಾಗಿ ನೆಗೆದು ಮುಳ್ಳುಗಳಿಂದ ಪಾರಾಗಿ ಮುಂದೆ ಹೋದ. ಎರಡನೆಯವ ಪಕ್ಕದಲ್ಲಿದ್ದ ಪೊದೆಯನ್ನು ಸ್ವಲ್ಪ ಕಡಿದು ದಾರಿಮಾಡಿಕೊಂಡು ಮುಂದೆ ಹೊರಟ. ಆದರೆ ಮೂರನೆಯ ಶಿಷ್ಯ ದಾರಿಯಲ್ಲಿ ಬಿದ್ದಿದ್ದ ಮುಳ್ಳುಗಳನ್ನೆಲ್ಲ ಆರಿಸಿ ಪಕ್ಕದ ಪೊದೆಗೆ ಎಸೆದ. ದಾರಿಯನ್ನು ಸ್ವಚ್ಛ ಮಾಡಿ ಮುಂದೆ ನಡೆದ.

ಇದನ್ನೆಲ್ಲ ಪೊದೆಯಲ್ಲಿ ಅವಿತು ನೋಡುತ್ತಿದ್ದ ಗುರು ಮೊದಲ ಇಬ್ಬರು ಶಿಷ್ಯರನ್ನು ಕುರಿತು " ನೀವು ಮತ್ತೆ ಆಶ್ರಮಕ್ಕೆ ಹೋಗಿ, ನಿಮ್ಮ ವಿದ್ಯಾಭ್ಯಾಸ ಇನ್ನೂ ಮುಗಿದಿಲ್ಲ" ಎಂದರು.

"ನಿನ್ನ ಶಿಕ್ಷಣ ಮುಗಿದಿದೆ. ನೀನು ಉತ್ತೀರ್ಣನಾಗಿರುವಿ" ಎಂದು ಮೂರನೆಯ ಶಿಷ್ಯನನ್ನು ಹರಸಿ ಆ ಗುರು ಬೀಳ್ಕೊಟ್ಟರು.

**ಕೃಪೆ : ಕೈತುತ್ತು**

# ವಿವಿಧೆಡೆಗಳಲ್ಲಿ ನಡೆದ ಕಾರ್ಯಕ್ರಮಗಳು




ಮಂಗಳೂರಿನಲ್ಲಿ ಕರ್ತವ್ಯಬೋಧ ದಿನಾಚರಣೆ

ಬೆಂಗಳೂರು ದಕ್ಷಿಣದಲ್ಲಿ ಕರ್ತವ್ಯಬೋಧ ದಿನಾಚರಣೆ





ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷ ದಿ. ಶಾಂತಕುಮಾರ್ ಬಿರಾದಾರ ಅವರ ನುಡಿ ನಮನ ಕಾರ್ಯಕ್ರಮ





ಅನುದಾನಿತ ಪಿಂಚಣಿ ವಂಚಿತರರ ಸಂಘ ನಡೆಸುತ್ತಿರುವ" ಪ್ರಾಣ ಬಿಟ್ಟೇವು ಪಿಂಚಣಿ ಬಿಡೇವು"138 ನೇ ದಿನದ ಹೋರಾಟಕ್ಕೆ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಬೆಂಬಲ ನೀಡಿದರು.



ಬೆಂಗಳೂರು ದಕ್ಷಿಣ ಜಿಲ್ಲೆ ಫೋನ್ ಇನ್ ಕಾರ್ಯಕ್ರಮ



ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿಗಳಾದ ಜಿ. ಲಕ್ಷ್ಮಣ್ ಜೀ ಅವರು ಹುಬ್ಬಳ್ಳಿಗೆ ಭೇಟಿ ನೀಡಿ, ಕಾರ್ಯಕರ್ತರ ಜೊತೆಯಲ್ಲಿ ಸಂಘಟನಾತ್ಮಕ ಚರ್ಚೆ ನಡೆಸಿದರು

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-02-2023 Date of Posting 20th or 21st of every month Posted at Periodical Rate

# ಮುಖ್ಯಮಂತ್ರಿಗಳೊಂದಿಗೆ ಕ.ರಾ.ಮಾ.ಶಿ.ಸಂಘದ ಪ್ರಮುಖರು



ರಾಜ್ಯ ಸರ್ಕಾರ 7ನೇ ವೇತನ ಆಯೋಗದಲ್ಲಿ ನವೋದಯ ಮತ್ತು ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಶಿಕ್ಷಕರಿಗೆ 'ಒಂದು ರಾಷ್ಟ್ರ, ಒಂದು ವೇತನ' ಜಾರಿ ಮಾಡಬೇಕು ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬೆಂಗಳೂರಿನಲ್ಲಿ ಮನವಿ ಸಲ್ಲಿಸಿತು.

ಮಾಧ್ಯಮಿಕ ಶಿಕ್ಷಕ ಸಂಘದ ನಿಯೋಗ ಗುರುವಾರ ಬೆಂಗಳೂರಿನಲ್ಲಿ ಬೊಮ್ಮಾಯಿ ಅವರಿಗೆ ಸಮಸ್ಯೆಗಳ ಪಟ್ಟಿಯನ್ನು ಸಲ್ಲಿಸಿದೆ. ಶಿಕ್ಷಣ ಸಚಿವರು ಹಾಗೂ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಬಜೆಟ್‌ನಲ್ಲಿ ಪರಿಗಣಿಸುವ ಭರವಸೆ ನೀಡಿದ್ದಾರೆ. ಪ್ರಮುಖವಾಗಿ ಓಪಿಎಸ್ ಜಾರಿ, 1995 ರ ನಂತರ ಆರಂಭವಾದ ಖಾಸಗಿ ಶಾಲಾ–ಕಾಲೇಜುಗಳಿಗೆ ಅನುದಾನ ವಿಸ್ತರಣೆಗೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದಾರೆ.

ನಿಯೋಗದಲ್ಲಿ ಸಂಘದ ರಾಜ್ಯಾಧ್ಯಕ್ಷ ಸಂದೀಪ್ ಬೂದಿಹಾಳ್, ರಾಜ್ಯ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟಿಲ್, ಕೋಶಾಧ್ಯಕ್ಷರಾದ ಜೆ ಎಂ ಜೋಷಿ, ಸಹ ಪ್ರಧಾನ ಕಾರ್ಯದರ್ಶಿಗಳಾದ ಗಂಗಾಧರ ಅಚಾರಿ, ಬಿ. ಎ ಸುರೇಂದ್ರ ಹಾಜರಿದ್ದರು.



ಕಾರವಾರದಲ್ಲಿ ಶಿಕ್ಷಣ ಸಚಿವರೊಂದಿಗೆ ಕ.ರಾ.ಮ.ಶಿ.ಸಂಘ ಕಾರವಾರ ಅಧ್ಯಕ್ಷರಾದ ಶ್ರೀ ಪ್ರಕಾಶ ರಾಣೆ ಮತ್ತು ನಿಯೋಗ ಸಭೆ ನಡೆಸಿದರು.



ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕರ್ನಾಟಕದ ಪ್ರಮುಖರು

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

**D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.**

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com